ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಮಸೂದೆಗಳ ಪರ್ಯಾಲೋಚನೆ ಮತ್ತು ಚರ್ಚೆಗಳು ನಾಳೆ ಮುಂದುವರಿಯಲಿ. ಏಕೆಂದರೆ, ಗಂಭೀರವಾದಂಥ ವಿಚಾರಗಳಿವೆ. ಇವತ್ತು ಮಂಡನೆ ಮಾಡಿದ್ದೀರಿ. ಅದರ ಬಗ್ಗೆ ಚರ್ಚೆಯಾಗಬೇಕು.

ಅಧ್ಯಕ್ಷರು : ಇದು ಈಗಾಗಲೇ ಮಂಡನೆಯಾಗಿದೆ. ಅನುಬಂಧ (iii)

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಇದು ಇವತ್ತಿನ ಅಜೆಂಡಾದಲ್ಲಿ ಬಂದಿದ್ದು ನಮಗೆ ಸರ್ಕ್ಯುಲೇಟ್ ಮಾಡಿದ್ದಾರೆ. ಪರ್ಯಾಲೋಚನೆಯನ್ನೂ ಇವತ್ತೇ ತೆಗೆದುಕೊಂಡರೆ ಹೇಗೆ? ತೀರಾ ಅರ್ಜೆಂಟ್ ಇದೆ, ಇದು ಫೈನ್ಯಾನೆಷಿಯಲ್ ಬಿಲ್, ನಾಳೆಯೇ ಕೊನೆಯ ದಿವಸ ಎನ್ನುವ ಹಾಗಿದ್ದರೆ ಪರವಾಗಿಲ್ಲ. ನಾವು ಇನ್ನೂ 15-20 ದಿನ ಸೇರುತ್ತೇವೆ. ಪರ್ಯಾಲೋಚನೆ ಮತ್ತು ಮಂಡನೆ ಎರಡೂ ಒಂದೇ ದಿನ ಮಾಡಿದರೆ ಹೇಗೆ? ಅದು ಅಷ್ಟು ಸೂಕ್ತವಲ್ಲ.

MR. SPEAKER : Alright, we will take up tomorrow. ಈಗ ರಾಜ್ಯಪಾಲರ ಭಾಷಣ ಮೇಲಿನ ಚರ್ಚೆ. ಸೋಮಶೇಖರ್‌ರವರದ್ದು ಮುಗಿದ ಮೇಲೆ ವೈ.ಕೆ. ರಾಮಯ್ಯನವರು ಮಾತನಾಡುತ್ತಾರೆ.

6. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರಿದ ಚರ್ಚೆ

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ನಿನ್ನೆ ಮಾನ್ಯ ರಾಜ್ಯಪಾಲರ ಭಾಷಣದ ವಂದನಾನಿರ್ಣಯದ ಬಗ್ಗೆ ಮಾತನಾಡುತ್ತಾ ಅನೇಕ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಸರ್ಕಾರದವರು ರಾಜ್ಯಪಾಲರ ಭಾಷಣದಲ್ಲಿ ಏನು ಘೋಷಣೆಗಳನ್ನು ಮಾಡಿದ್ದಾರೆ ಮತ್ತು ಇಲ್ಲಿ ಮಂಡಿಸಿದಂಥ ಆಯವ್ಯಯದಲ್ಲಿ ಏನೇನು ಯೋಜನೆಗಳನ್ನು ಹಾಕಿಕೊಂಡಿದ್ದಾರೆ, ಎಷ್ಟು ಹಣವನ್ನು ಒದಗಿಸಿದ್ದಾರೆ, ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಎನ್ನುವುದನ್ನು ವಿಚಾರ ಮಾಡಲು ರಾಜ್ಯಪಾಲರ ಭಾಷಣ ಮತ್ತು ಆಯವ್ಯಯದ ಮಂಡನೆ ಇವೆರಡರ ಮೇಲೆ ಒಟ್ಟಿಗೆ ಚರ್ಚೆ ಮಾಡಲು ಅವಕಾಶ ಸಿಕ್ಕಿದೆ. ಇಂಥ ಸಂದರ್ಭ ಯಾವಾಗಲೂ ಸಿಕ್ಕಿರಲಿಲ್ಲ. ಬಜೆಟ್ ಮಂಡನೆ ಆದಮೇಲೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡತಕ್ಕಂಥ ಅವಕಾಶ ಇದೇ ಮೊದಲು ಇರಬಹುದೆಂದು ಭಾವಿಸುತ್ತೇನೆ. ಈಗಾಗಲೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡವರ ಇಲಾಖೆಯ ಯೋಜನೆಗಳ ಬಗ್ಗೆ, ಗ್ರಾಮಾಣಾಭಿವೃದ್ಧಿ ಇಲಾಖೆಯ ಯೋಜನೆಗಳ ಬಗ್ಗೆ, ವಿದ್ಯುಚ್ಛಕ್ತಿ ಬಗ್ಗೆ ನಿನ್ನೆ ಮಾತನಾಡಿ ಮತ್ತು ಶಿಕ್ಷಣ ಮತ್ತು ಇನ್ನಿತರ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಶಿಕ್ಷಣದ ಬಗ್ಗೆ ಸರ್ಕಾರ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಪ್ರತಿಯೊಬ್ಬರ ಆಶಯವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಅನುದಾನವನ್ನು ಶೇಕಡ 15ರಷ್ಟು ಕಡಿತ ಮಾಡಿದ್ದೇವೆ, ಸರ್ಕಾರಿ ಕಾಲೇಜುಗಳಿಗೆ ಯಾವುದೇ ರೀತಿಯ ಕಡಿತ ಮಾಡಲಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಕೆಲವು ವಿದ್ಯಾ ಸಂಸ್ಥೆಗಳಿಗೆ ಕಳೆದ 25-30 ವರ್ಷಗಳಿಂದ ನಾವು ಅನುದಾನವನ್ನು ಕೊಡುತ್ತಾ ಬಂದಿದ್ದೇವೆ. ಅದರಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಾಲಾ ಮತ್ತು ಕಾಲೇಜು ಹಂತಗಳಲ್ಲಿ ಸುಮಾರು 800 ರಿಂದ 1,000 ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಅನುದಾನ ರೂಪದಲ್ಲಿ ಕೊಡಲಾಗುತ್ತಿದೆ. ಅದರಲ್ಲಿ ಖಾಸಗಿ ಸಂಸ್ಥೆಗಳಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ

ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಮತ್ತು ಅಲ್ಲಿ ಶಿಕ್ಷಕರ ನೇಮಕಾತಿ ಬಗ್ಗೆ ನೋಡುವುದಾದರೆ, ಅಲ್ಲಿಗೆ ಸರ್ಕಾರದಿಂದ ಅನುದಾನವನ್ನು ನೂರಕ್ಕೆ ನೂರರಷ್ಟು ಕೊಟ್ಟಿದ್ದರೂ ಸಹಿತ ಅಲ್ಲಿ ಮಾಸಲಾತಿಯನ್ನು ಅನುಸರಿಸಿಲ್ಲ. ಮಾನ್ಯ ಶಿಕ್ಷಣ ಮಂತ್ರಿಯವರು ಇದರ ಕಡೆಗೆ ಗಮನಹರಿಸಬೇಕು. ತಮ್ಮ ಇಲಾಖೆಯಿಂದ ಸುಮಾರು 600 ರಿಂದ 700 ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತಿದ್ದೀರಿ. ಆದರೆ ಅಲ್ಲಿ ನೇಮಕಾತಿ ವಿಚಾರದಲ್ಲಿ ಬಹಳ ಅನ್ಯಾಯವಾಗಿದೆ ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ನಾನು ಆ ಖಾತೆಯನ್ನು ಸುಮಾರು 10- 12 ವರ್ಷಗಳ ಹಿಂದೆ ವಹಿಸಿಕೊಂಡು ನಡೆಸಿದ್ದೇನೆ. ಮತ್ತು ಉನ್ನತ ಶಿಕ್ಷಣ ಇಲಾಖೆಯನ್ನು ಸಹ 2- 3 ವರ್ಷಗಳ ಹಿಂದೆ ನಡೆಸಿದಂಥ ಅನುಭವ ಸಹ ನನಗಿದೆ. ನಮ್ಮ ಸರ್ಕಾರ ಇದ್ದಾಗ ನಾವು ಎರಡು ಮೂರು ವಿಚಾರಗಳನ್ನು ಯೋಚನೆ ಮಾಡಿದೆವು. ಅದೇನೆಂದರೆ ಕೆಲವು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸಂಸ್ಥೆಗಳು ಅನುದಾನರಹಿತ ಬಹಳ ವರ್ಷಗಳಿಂದ ಕೆಲವು ಶಿಕ್ಷಣ ಸಂಸ್ಥೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಕೆಲವು ಸಂಸ್ಥೆಗಳು ಬಹಳ ಕಷ್ಟದಿಂದ ನಡೆಸಿಕೊಂಡು ಬಂದಿದ್ದಾರೆ. ಇಂಥ ಸಂಸ್ಥೆಗಳಿಗೆ ಸರ್ಕಾರದಿಂದ ವಿಶೇಷವಾದ ಅನುದಾನವನ್ನು ಕೊಡತಕ್ಕಂಥ ಅವಶ್ಯಕತೆಯಿದೆ ಎಂದು ಹೇಳಿದ ಮೇಲೆ ನಮ್ಮ ಸರ್ಕಾರ ಕ್ಯಾಬಿನೆಟ್ ಸಮಿತಿಯನ್ನು ರಚನೆ ಮಾಡಿ ಮತ್ತು ಒಂದು ತಜ್ಞರ ಸಮಿತಿಯನ್ನು ರಚನೆ ಮಾಡಿ ಬೋಗಸ್ ಸಂಸ್ಥೆಗಳಿಗೆ ಅನುದಾನ ಕೊಡತಕ್ಕಂಥ ಅವಶ್ಯಕತೆಯಿಲ್ಲ. ಇದರಲ್ಲಿ ಯಾರು ಪ್ರಾಮಾಣಿಕವಾಗಿ ಸೇವಾ ಮನೋಭಾವನೆಯಿಂದ ನಡೆಸುತ್ತಿದ್ದಾರೆ ಅಂಥ ಸಂಸ್ಥೆಗಳನ್ನು ಗುರುತಿಸಬೇಕು, ಅಂಥ ಸಂಸ್ಥೆಗಳನ್ನಾದರೂ ಪರಿಗಣಿಸಬೇಕು ಎಂದು ತೀರ್ಮಾನ ತೆಗೆದು ಕೊಂಡು ಗುರುತಿಸುವುದಕ್ಕೆ ನಾವು ಸ್ವಲ್ಪ ಕಸರತ್ತು ಮಾಡಿದೆವು. ಆದರೆ ಅಷ್ಟರಲ್ಲಿ ನಮ್ಮ ವಿಧಾನಸಭೆ ಚುನಾವಣೆ ಬಂತು. ಆದ್ದರಿಂದ ನಾವು ಇವತ್ತು ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ- ನೀವು ಈ ವಿಚಾರವನ್ನು ಅಲ್ಲಿಗೆ ಬಿಡದೆ ಕೈಗೆತ್ತಿಕೋಡು, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಶೇಕಡ 50 ಪರಿಶಿಷ್ಟ ಜಾತಿಯವರು ಇರಬೇಕು, ಮತ್ತು ಅಲ್ಲಿ ಶೇಕಡ 50ರಷ್ಟು ಶಿಕ್ಷಕರನ್ನು ನೇಮಕಾತಿ ಮಾಡಬೇಕೆನ್ನುವ ಕಡ್ಡಾಯ ನಿಯಮವಿದೆ. ಕನಿಷ್ಟ ಪಕ್ಷ ಆ ನಿಯಮಾಳಿಯನ್ನು ಕಟ್ಟು ನಿಟ್ಟಾಗಿ ಪಾಲಿಸಿದರೆ ಅಲ್ಲಿ ಹೆಚ್ಚು ವಿದ್ಯಾರ್ಥಿಗಳು, ಮತ್ತು ಶಿಕ್ಷಕರು ನೇಮಕ ಆಗುವುದಕ್ಕೆ ಅವಕಾಶ ಇದೆ. ಆದ್ದರಿಂದ ಸರ್ಕಾರದಿಂದ ಕೊಡುವ ಅನುದಾನದಲ್ಲಿ ಶೇಕಡ 18ರಷ್ಟು ನೀವು ಕೊಡುತ್ತಾ ಬಂದರೆ ಆ ಸಂಸ್ಥೆಗಳಿಗೆ ಎಷ್ಟೋ ಅನುಕೂಲವಾಗುತ್ತದೆ. ದಯಮಾಡಿ ಈ ದಿಕ್ಕಿನಲ್ಲಿ ಸರ್ಕಾರ ಚಿಂತನೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

(ಶ್ರೀ ಬಿ.ಆರ್. ಯಾವಗಲ್, ಛೇರ್ಮನ್ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು) ಮತ್ತು ಈ ಕೆಲಸ ಎಲ್ಲಿ ನಿಂತಿದೆ ಅದನ್ನು ಕೈಗೆತ್ತಿಕೊಂಡು ಸದರಿ ಸಮಸ್ಯೆಯನ್ನು ನಿವಾರಣೆ ಮಾಡಲು ಯಾವ ಶಿಕ್ಷಣ ಸಂಸ್ಥೆ ಅರ್ಹ ಇದೆ, ಪ್ರಾಮಾಣಿಕವಾಗಿ ಸೇವಾ ಮನೋಭಾವನೆಯಿಂದ ಯಾರು ಸಂಸ್ಥೆಯನ್ನು ನಡೆಸುತ್ತಿದ್ದಾರೆ ಅಂಥವರಿಗೆ ಅನುದಾನವನ್ನು ಕೊಡತಕ್ಕಂಥ ತೀರ್ಮಾನವನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮಾನ್ಯ ಮುಖ್ಯಮಂತ್ರಿಯವರು ಆಡಳಿತದ ಬಗ್ಗೆ ರಾಜ್ಯಪಾಲರ ಭಾಷಣದ ಮೂಲಕ ಬಹಳ ಸ್ವಾರಸ್ಯವಾಗಿ ಹೇಳಿದ್ದಾರೆ ಮತ್ತು ಪತ್ರಿಕಾ ಸಂದರ್ಶನದಲಿ, ಬೇರೆ ಬೇರೆ ಮಾಧ್ಯಮಗಳಾದ ದೂರದರ್ಶನ, ಉದಯ ಮಾಧ್ಯಮದಲ್ಲಿ ಹೀಗೆ ಎಲ್ಲಾ ಕಡೆ ಹೇಳಿರುವುದನ್ನು ನಾವು ಕೇಳಿದ್ದೇವೆ. ಅವರ ಒಂದು ಹೇಳಿಕೆಯ ಬಗ್ಗೆ ಸಾರ್ವಜನಿಕರಲ್ಲಿ ಬಹಳ ಒಳ್ಳೆಯ ಅಭಿಪ್ರಾಯ ಮೂಡಿದೆ. ನನಗಂತೂ ಬಹಳ ಸಂತೋಷವಾಗಿದೆ. ಅವರು ಏನು ಹೇಳಿದ್ದಾರೆಂದರೆ "The concept of governance has been gradually transformed in the last century. It is no

longer an elite group controlling the destinites of millions of people. At the commencement of the millennium the role of governmnet is being redifined as a catalyst for change and progress rather than as an agency of regulation. Governance has become a participatory institution in whihc the humblest citizen has a voice. Hence. there is an urgent need to promote transparency and accountability in administration. My Government will ceaselessly try to weed out corruption and inefficiency in administration on the one hand and promote people friendly governance on the other hand. I hope that all these measures will contribute to the growth of a prosperous Karnataka where people can live in an atmosphere of tolerance, peace and harmony." ಬಹುಶಃ ಮಾನ್ಯ ಮುಖ್ಯಮಂತ್ರಿಯವರು ಈ ಕೊನೆಯ ಪ್ಯಾರಾವನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹಾಕಿರುವುದನ್ನು ನೋಡಿ I was flabbergasted. I was really impressed by your statement given in the governor's speech. ಮಾನ್ಯ ಮುಖ್ಯಮಂತ್ರಿಯವರಿಗೆ ಅಗಾಧವಾದ ಅನುಭವ ಇದೆ ಎಂದು ನಾನು ಆವಾಗ ಅಂದುಕೊಂಡೆ. ಇವತ್ತು ಈ ಸದನದಲ್ಲಿ ಹಿರಿಯ ಸದಸ್ಯರಾಗಿರತಕ್ಕಂಥವರಲ್ಲಿ ಮುಖ್ಯಮಂತ್ರಿಗಳಾಗಿರತಕ್ಕಂಥವರು ಶ್ರೀಮಾನ್ ಕೃಷ್ಣ ಅವರು. ಅವರು 1962ರಲ್ಲಿ ಈ ಸದನಕ್ಕೆ ಬಂದರು. ಕೇಂದ್ರದಲ್ಲಿ ಮಂತ್ರಿಯಾಗಿ, ಸ್ಪೀಕರ್ ಆಗಿ ಮತ್ತು ವಿವಿಧ ದೇಶಗಳಿಗೆ ಪ್ರವಾಸ ಮಾಡಿ ಬಂದಿದ್ದವರು ಅಗಾಧವಾದಂಥ ಅನುಭವವಿದ್ದು ಚೆನ್ನಾಗಿ ತಿಳಿದುಕೊಂಡಿದ್ದಾರೆ, ಮುತ್ಸದ್ಧಿ ರಾಜಕಾರಣಿ ಎಂದು ನಾವು ಕೇಳಿದ್ದೇವೆ. ಆದರೆ it should be transformed into action. ಜನರು ಯಾವಾಗ ಮೆಚ್ಚುತ್ತಾರೆಂದರೆ, ಯಾವಾಗ ಒಂದು ಹೇಳಿಕೆ ಬರುತ್ತದೆ ಆ ಹೇಳಿಕೆಗೂ ಮತ್ತು ಕಾರ್ಯಗತ ಮಾಡತಕ್ಕಂಥದ್ದಕ್ಕೂ ತುಲನೆ ಮಾಡಿ ನೋಡುತ್ತಾರೆ. ಆವಾಗ Whether there is really transparency in the administration, where there is really an attempt to weed out corruption, whethere there is an attempt to posting based on merit, impartiality and objectivity ,ಇದನ್ನು ನೋಡಿದಾಗ ಮತ್ತು ಕಳೆದ 6 ತಿಂಗಳ ಅಡಳಿತವನ್ನು ನೋಡಿದಾಗ ಎಲ್ಲೋ ಒಂದು ಕಡೆ ಎಡವಿದ್ದಾರೆ ಎಂದು ನಮಗಂತೂ ಭಾಸವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮೇಲೆ ಉತ್ತರ ಕೊಡುತ್ತಾ- ನಾವು ಟ್ರಾನ್ಸ್‌ಫರ್ ಮಾಡುವಾಗ ಯಾವುದೇ ಒತ್ತಡಕ್ಕೆ, ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯುವುದಿಲ್ಲ, ನಿರ್ಭೀತಿಯಿಂದ ನಿಷ್ಪಕ್ಷಪಾತವಾಗಿ ಒಳ್ಳೆಯ ಅಧಿಕಾರಿಗಳನ್ನು ನಾವು ರಕ್ಷಣೆ ಮಾಡುತ್ತೇವೆ. ಎನ್ನುವ ಮಾತನ್ನು ಹೇಳಿದರು. ಮೊನ್ನೆ ತಾನೇ ಕೆಲವೊಂದು ಪೋಸ್ಟಿಂಗ್ಸ್ ಆಯಿತು. ಅವರ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಏನು ಕೆಲವು ಅಧಿಕಾರಿಗಳನ್ನು ವರ್ಗಾವರ್ಗಿ ಮಾಡಿದರು ಅದನ್ನು ಮೂರೇ ತಿಂಗಳಲ್ಲಿ ಬದಲಾವಣೆ ಮಾಡಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ನಿಜವಾಗಿಯೂ ಆ ಒಂದು ದೃಢ ಮನಸ್ಸು ಇದ್ದಿದ್ದರೆ ಈ ರೀತಿ ಮಾಡುತ್ತಿರಲಿಲ್ಲ. ಅವರು ಯಾವ ಯಾವ ಅಧಿಕಾರಿಗಳನ್ನು ಯಾವಾಗ ಬದಲಾವಣೆ ಮಾಡಿದ್ದಾರೆ ಎನ್ನುವ ವಿಚಾರಗಳಿಗೆ ಹೋಗುವುದಿಲ್ಲ. ಮತ್ತು ಕೆಲವು ಜಿಲ್ಲಾಧಿಕಾರಿಗಳನ್ನು ವರ್ಗಾವಣೆ ಮಾಡಿ ಇನ್ನೂ ಎರಡು ವರ್ಷಗಳು ಮುಗಿಯದಿದ್ದರೂ ಸಹ ಪ್ರತ್ಯೇಕ ಪ್ರತ್ಯೇಕವಾದ ಸಿಂಗಲ್ ಆರ್ಡರ್ ಮಾಡಿ ವರ್ಗಾವಣೆ ಮಾಡಿದ್ದಾರೆ. ಯಾವ ಕಾರಣಕ್ಕಾಗಿ ಮಾಡಿದ್ದಾರೆ ಎನ್ನುವುದು ನನಗಂತೂ

ಅರ್ಥವಾಗುತ್ತಿಲ್ಲ. ಇದರಿಂದ ಅವರು ಹೇಳಿದಂಥ ಸ್ಟೇಟ್‌ಮೆಂಟ್‌ಗೂ ಮತ್ತು ಮಾಡಿದಂಥ ಕೆಲಸಕ್ಕೂ ಬಹಳ ವ್ಯತ್ಯಾಸ ಕಾಣುತ್ತದೆ. ಉದಾಹರಣೆಗೆ ಹೇಳುವುದಾದರೆ ಸೌತ್ ಕೆನರಾ ಜಿಲ್ಲಾಧಿಕಾರಿಯಿರಬಹುದು. ನಾವು ನೋಡಿದ ಹಾಗೆ ಅವರು ಉತ್ತಮವಾದ ಅಧಿಕಾರಿ. ಮಂಗಳೂರಿನಲ್ಲಿ ನಿರ್ಭೀತಿಯಿಂದ ಯಾರು ಕೆಲವ ಲ್ಯಾಂಡ್ ಶಾರ್ಕ್ಸ್ ಇದ್ದರೋ ಅಂಥವರ ಬಗ್ಗೆ ಇವರು ಕಟ್ಟು ನಿಟ್ಟಿನ ಕ್ರಮ ತೆಗೆದುಕೊಳ್ಳುತ್ತಿದ್ದರು, ನಮ್ಮ ಕಾಲದಲ್ಲೂ ಕೂಡ ನಾವು ಇಂಥ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೆವು. ಇದರ ಜೊತೆಗೆ ಅಬಕಾರಿ ಬಾಕಿ ಏನಿತ್ತು ಇದನ್ನು ಕೂಡ ಕಟ್ಟುನಿಟ್ಟಾಗಿ ವಸೂಲಿ ಮಾಡಿ ಒಳ್ಳೆಯ ಹೆಸರನ್ನು ಗಳಿಸಿದ್ದರು, ಇಂಥವರನ್ನು ನೀವು ತಕ್ಷಣ ವರ್ಗ ಮಾಡಿದಿರಿ. ಯಾರು ನಿರ್ಭೀತಿಯಿಂದ, ಪ್ರಾಮಾಣಿಕವಾಗಿ ಕೆಲಸ ಮಾಡುವಂತಹ ಅಧಿಕಾರಿಗಳು ಇದ್ದಾರೆ ಇಂಥವರನ್ನು ವರ್ಗ ಮಾಡುತ್ತಾರೆ ಎನ್ನತಕ್ಕಂಥ ಅಭಿಪ್ರಾಯ ಸಾರ್ವಜನಿಕರಲ್ಲಿ ಮೂಡಿದೆ. ನಿಜವಾಗಲೂ ಇದು ಒಳ್ಳೆಯ ಲಕ್ಷಣ ಅಲ್ಲ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನನಗೆ ವೈಯಕ್ತಿಕವಾಗಿ ಗೌರವ ಇದೆ, ನಿಮ್ಮ ಮಾತುಗಳನ್ನು ನಾನು ಮೆಚ್ಚುತ್ತೇನೆ, ಏಕೆಂದರೆ, ನನಗೆ ತಿಳಿದಹಾಗೆ ಮಾನ್ಯ ದೇವರಾಜ್ ಅರಸ್ ರವರಿಗೆ ಯಾವ ಒಂದು ಅವಕಾಶ ಸಿಕ್ಕಿತ್ತೋ ಅಂಥ ಒಂದು ಒಳ್ಳೆಯ ಅವಕಾಶ ತಮಗೆ ಲಭಿಸಿದೆ. ನೀವು ಯಾವ ಒಳ್ಳೆಯ ಆಡಳಿತವನ್ನು ಕೊಡಬೇಕು ಎಂದು ಅಂದುಕೊಂಡಿದ್ದೀರಿ ಅದನ್ನು ನೀವು ಕೊಡಬಹುದು ಎಂದು ನನಗನ್ನಿಸುತ್ತದೆ. ಆದರೆ ಎರಡು-ಮೂರು ವಿಚಾರಗಳಲ್ಲಿ ತಾವು ಏನು ಹೇಳಿಕೆ ಕೊಟ್ಟಿದ್ದೀರಿ ಅದರಂತೆ ನೀವು ನಡೆದುಕೊಳ್ಳಲಿಲ್ಲ. ನೀವು ಮೊದಲು ಜಿಲ್ಲಾ ಮಂತ್ರಿಗಳನ್ನು ನೇಮಕಾತಿ ಮಾಡುವುದಿಲ್ಲವೆಂದು ಹೇಳಿದ್ದೀರಿ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು) : ನಾನು ಯಾವತ್ತು ಜಿಲ್ಲಾ ಮಂತ್ರಿಗಳನ್ನು ನೇಮಕಾತಿ ಮಾಡುವುದಿಲ್ಲವೆಂದು ಹೇಳಿಕೆ ಕೊಟ್ಟಿಲ್ಲ.

ಶ್ರೀ ಬಿ. ಸೋಮಶೇಖರ್ : ಒಬ್ಬ ಸೆಕ್ರೆಟರಿ ಮಟ್ಟದ ಅಧಿಕಾರಿಯನ್ನು ಒಂದು ಜಿಲ್ಲೆಗೆ ನೇಮಕ ಮಾಡಿ....

ಶ್ರೀ ಎಸ್.ಎಂ. ಕೃಷ್ಣ : ಜಿಲ್ಲಾ ಮಂತ್ರಿಗಳನ್ನು ನೇಮಕ ಮಾಡುವ ಮೊದಲು ಪ್ರತಿಯೊಂದು ಜಿಲ್ಲೆಗೂ ಕೂಡ ವಿಧಾಸೌಧದಿಂದ ಒಬ್ಬ ಸೆಕ್ರೆಟರಿ ಆ ಜಿಲ್ಲೆಯ ಉಸ್ತುವಾರಿ ನೋಡುತ್ತಿದ್ದರು they are not mutually exclusive. They are complementary to each other. That is what I had in mind ಮೊದಲು ಅಧಿಕಾರಿಗಳು ರಿವ್ಯೂ ಮಾಡಬೇಕು, ಮತ್ತು ಮಂತ್ರಿಗಳು ರಿವ್ಯೂ ಮಾಡಬೇಕು.

ಶ್ರೀ ಬಿ. ಸೋಮಶೇಖರ್ : ಪತ್ರಿಕೆಗಳಲ್ಲಿ ಬಂದಿದ್ದು ತಾವು ನೋಡಿದಿರಿ, ಅಂದರೆ ಅದನ್ನು ನೀವು ಡಿನೈ ಮಾಡಿರಲಿಲ್ಲ, ಡಿನೈ ಮಾಡಲಿಲ್ಲ.

ಶ್ರೀ ಎಸ್.ಎಂ. ಕೃಷ್ಣ : ಪತ್ರಿಕೆಗಳಲ್ಲಿ ಬಂದಿದ್ದಕ್ಕೆಲ್ಲಾ ನಾನು ಹೊಣೆಗಾರನಲ್ಲ. ಮುಖ್ಯಮಂತ್ರಿಯೊಬ್ಬರು ಪತ್ರಿಕೆಗಳಲ್ಲಿ ಬರುವುದನ್ನು ಡಿನೈ ಮಾಡುತ್ತಾ ಕುಳಿತರೆ ಸರ್ಕಾರಿ ಕೆಲಸ ಮಾಡುವ ಟೈಮ್ ಬಹಳ ಕಡಿಮೆಯಾಗುತ್ತದೆ. ಪತ್ರಿಕೆಗಳಲ್ಲಿ ಏನು ಬೇಕಾದರೂ ಬರೆಯಬಹುದು. ಆದರೆ ನಾನು ಉಸ್ತುವಾರಿ ಮಂತ್ರಿಗಳನ್ನು ಮಾಡುವುದಿಲ್ಲವೆಂದು ಹೇಳಿಲ್ಲ.

ಶ್ರೀ ಬಿ. ಸೋಮಶೇಖರ್ : ಆಯಿತು, ಹೇಳದೇ ಇದ್ದರೆ ಮಾಡಿದ್ದಾರೆಂದು ತಿಳಿದು ಕೊಳ್ಳೋಣ. ಈಗ ನಾನು ತಮಗೆ ಏನು ಹೇಳಬಯಸುತ್ತೇನೆಂದರೆ, ನಿಮಗೆ ಇವತ್ತು ರಾಜಕೀಯವಾಗಿ ಅವಕಾಶಗಳು

ಮತ್ತು ಶಕ್ತಿಯೂ ಇದೆ. ನಿಜವಾಗಿ ನೀವು ಒಳ್ಳೆಯ ಆಡಳಿತ ಕೊಡಬೇಕು ಎಂದು ಕೊಂಡಿದ್ದರೆ ಕೆಲವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಮಾಡಿದ್ದೇ ಆದರೆ ನೀವು ಇತಿಹಾಸದಲ್ಲಿ ದಾಖಲಾಗುತ್ತೀರಿ. ಏಕೆಂದರೆ, ಇವತ್ತು ರಾಜಕೀಯವಾಗಿ ನೀವು ಸುಮಾರು 151 ಸದಸ್ಯರನ್ನು ಇಟ್ಟುಕೊಂಡು ಬಹಳ ಶಕ್ತಿಯುತರಾಗಿದ್ದೀರಿ. ಇದರ ಜೊತೆಗೆ ನಿಮ್ಮ ಪಕ್ಷದ ಬೆಂಬಲವನ್ನೂ ಕೂಡ ನೀವು ಪಡೆದುಕೊಂಡಿದ್ದೀರಿ. ಕಂಬಾಲಪಲ್ಲಿಗೆ ಶ್ರೀಮತಿ ಸೋನಿಯಾ ಗಾಂಧಿಯವರು ಬಂದು ಯಾವುದೇ ಕಾರಣದಿಂದ ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡುವುದಿಲ್ಲವೆಂದು ನಿಮಗೊಂದು ಸರ್ಟಿಫಿಕೇಟ್ ಕೊಟ್ಟು ಹೋದರು. So, you have a sancition for continuation. ಇದರ ಜೊತಗೆ ಇವತ್ತು ಮೂರು ರಾಜ್ಯಸಭಾ ಸದಸ್ಯರನ್ನು ಗೆಲ್ಲಿಸಿಕೊಟ್ಟಿರುತ್ತೀರಿ, ತಮ್ಮ ಚಾಣಕ್ಷತನದಿಂದ ಬೇರೆ ಪಕ್ಷದವರನ್ನು ನಿಮ್ಮ ಪಕ್ಷಕ್ಕೆ ಸೇರಿಸಿಕೊಂಡು ಶಕ್ತಿಯುತರಾಗಿದ್ದೀರಿ. ನೀವು ಮುಂದುವರಿಯಬೇಕು ಎಂಬುದೇ ನಮ್ಮ ಆಶೆ.

ಶ್ರೀ ಎಸ್.ಎಂ. ಕೃಷ್ಣ : ಬೇರೆ ಪಕ್ಷದಿಂದ ಟೆಂಪ್ಟ್ ಷೆಡ್ಯೂಲ್ ಚೌಕಟ್ಟಿನಲ್ಲಿ ನಮ್ಮ ಪಕ್ಷದ ಸಿದ್ಧಾಂಥವನ್ನು ಒಪ್ಪಿ, ನಮ್ಮ ಪಕ್ಷದ ನಾಯತಕ್ವನ್ನು ಒಪ್ಪಿ, ಯಾರಾದರೂ ಬಂದಾಗ ನೀವು ನನ್ನ ಸ್ಥಾನದಲ್ಲಿ ಇದ್ದರೆ ಏನು ಮಾಡುತ್ತಿದ್ದೀರಿ? ಬೇಡ ಎಂದು ದುರ್ವಾಸ ಮುನಿಗಳ ತರಹ ಕೈ ಎತ್ತುತ್ತಿದ್ದೀರಾ? ಟೆಂಪ್ಟ್ ಷೆಡ್ಯೂಲ್ ಏಕೆ ಇರಬೇಕಾಗಿತ್ತು? ಸಾರ್ವತ್ರಿಕವಾಗಿ ಒಂದು ಏನಿದೆ ಅಂದರೆ ಪಕ್ಷಾಂತರ, ಪಕ್ಷಾಂತರ. ಪಕ್ಷಾಂತರಕ್ಕೆ ಈ ರಾಜಕಾರಣದಲ್ಲಿ ಅವಕಾಶವಿದೆ. ಇದು ಆ ಟೆಂಪ್ಟ್ ಷೆಡ್ಯೂಲ್ ಒಳಗಡೆ ಆಗಬೇಕು. ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಬರಬೇಕಾದರೆ ಆ ಪಕ್ಷ ಸಿಡಿದು ಅದಕ್ಕೆ ಒಂದು ಪ್ರತ್ಯೇಕವಾದ ಅಸ್ತಿತ್ವ ಬೇಕು, ಅನಂತರ ಅಧ್ಯಕ್ಷರು ಅದನ್ನು ಗುರುತಿಸಬೇಕು, ಅನಂತರ ಅವರು ಮತ್ತೊಂದು ಪಕ್ಷದಲ್ಲಿ ವಿಲೀನ ಆಗುವುದಕ್ಕೆ ತೀರ್ಮಾನಿಸಬೇಕು, ಆಡಳಿತದ ಅಥವಾ ಯಾವುದೇ ಪಕ್ಷವು ಅವರನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ದರಾಗಿರಬೇಕು, ಈ ಎಲ್ಲಾ ಮೆಟ್ಟಿಲುಗಳನ್ನು ಹತ್ತಿದ ಮೇಲೆ ಅವರು ಈ ಪಕ್ಷದ ಸದಸ್ಯರಾಗುತ್ತಾರೆ. ಬೇಕಾದರೆ ಟೆಂಪ್ಟ್ ಷೆಡ್ಯೂಲ್ ಅನ್ನು ಅಬಾಲಿರ್ಷ ಮಾಡುವುದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ. ಈ ರೀತಿ ಮಾಡಿದರೆ ಆಗ ಯಾರು ಪಕ್ಷಾಂತರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ವಿ.ಪಿ.ಸಿಂಗ್‌ರವರು ಟೆಂಪ್ಟ್ ಷೆಡ್ಯೂಲ್ ಅನ್ನು ತೆಗೆದು ಹಾಕಬೇಕೆಂದು ಹೇಳಿದ್ದಾರೆ. ಒಟ್ಟಾರೆಯಾಗಿ ಯಾಕಾಯಿತು, ಇದನ್ನು ತೆಗೆದು ಹಾಕಬೇಕಾದರೆ, ಎಲ್ಲಾ ರಾಜಕೀಯ ಪಕ್ಷಗಳು ಒಟ್ಟಾಗಿ ಸೇರಿ ದರ ಬಗ್ಗೆ ಚರ್ಚಿಸೋಣ. ಬೇಕಾದರೆ ಈ ವಿಚಾರದಲ್ಲಿ ಸಾರ್ವಜನಿಕವಾದಂಥ ಡಿಬೆಟಿ ಪ್ರಾರಂಭವಾಗಲಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಮುಖ್ಯಮಂತ್ರಿಗಳು ಬಹಳ ವಿಚಾರವಾಗಿ ಹೇಳಿದರು. ಅವರಿಗೆ ಮನಸ್ಸು ಬಂತು ನೀವು ಸೇರಿಕೊಂಡಿರಿ. ಇದಕ್ಕೆ ರಾಜ್ಯಸಭಾ ಚುನಾವಣೆಯೇ ಬೇಕಾಗಿತ್ತಾ?

ಶ್ರೀ ಎಸ್.ಎಂ. ಕೃಷ್ಣ : ಈ ಪ್ರಶ್ನೆ ಬಗ್ಗೆ ನನ್ನನ್ನು ಕೇಳಬೇಡಿ ಯಾರು ಅರ್ಜಿ ಹಾಕಿದ್ದಾರೋ ಅವರನ್ನೇ ಕೇಳಿ.

ಶ್ರೀ ಎಸ್.ಎಸ್. ಪಾಟೀಲ್ : ನಾನು ನಿಮ್ಮನ್ನೇ ಈ ಪ್ರಶ್ನೆ ಕೇಳುತ್ತೇನೆ, ರಾಜ್ಯಸಭಾ ಚುನಾವಣೆಯ ಸಮಯ ಬಂದಿದ್ದರಿಂದ ನೀವು ಅವರನ್ನು ಕರೆದಿರಿ. ಇಲ್ಲದಿದ್ದರೆ ಕರೆಯುತ್ತಿರಲಿಲ್ಲ. ಮೊದಲು ನೀವು ಯಾರ ಅವಶ್ಯಕತೆ ಇಲ್ಲವೆಂದು ಹೇಳಿದ್ದಿರಿ.

ಶ್ರೀ ಕೆ ಶ್ರೀನಿವಾಸ ಗೌಡ : ಶ್ರೀ ರಾಜೀವ್ ಗಾಂಧಿಯವರು Anti- Defection ಬಿಲ್ ತರುವ ಉದ್ದೇಶ ಏನಿತ್ತು ಎಂದರೆ, ಈ ಕಡೆ ಆ ಕಡೆ ಬಹಳಷ್ಟು ಓಡಾಡುತ್ತಾರೆ, ಇದನ್ನು ತಡೆಗಟ್ಟಬೇಕು ಎನ್ನುವ ಉದ್ದೇಶದಿಂದ ಮಾಡಿದ್ದರು. ನಿಮ್ಮ ಪಕ್ಷದ ನಾಯಕರು ಮಾಡಿದ್ದನ್ನ ರಾಜ್ಯ ಸಭಾ ಚುನಾವಣೆ ಬಂದಾಗ

ಸೆಕ್ಯೂಲೆರ್ ಪಾರ್ಟಿಯನ್ನು ಒಡೆದು ಇನ್‌ಸೆಕ್ಯೂಲೆರ್ ಆಗಿ ಅವರನ್ನು ಮಾಡಿ ಬಿಟ್ಟಿದ್ದೀರಿ. ಇದಕ್ಕೆ ನಿಮ್ಮಲ್ಲಿಯೇ ಹಿಂದೆ ಒಂದು ಚರಿತ್ರೆ ಇದೆ. ಮಾನ್ಯ ಗುಂಡುರಾಯರವರು ಇದೇ ರೀತಿ ಪಕ್ಷಾಂತರಕ್ಕೆ ಪ್ರೋತ್ಸಾಹ ಮಾಡಿ ಕೊನೆಗೆ ಅವರ ಸರ್ಕಾರವೇ ಮೂರು ವರ್ಷಕ್ಕೆ ಹೋಯಿತು. ನೀವು ಕೂಡ ಇದೇ ದಾರಿಯಲ್ಲಿ ಹೋಗುತ್ತಿದ್ದೀರಿ ಎನ್ನುವಂಥ ಅನುಮಾನ ನನಗಂತೂ ಇದೆ ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಶ್ರೀನಿವಾಸ ಗೌಡರವರೇ ನೀವು ಮೊದಲು ನ್ಯೂಸ್ ಪ್ರಿಂಟ್ ಮಾಡುತ್ತಿದ್ದುದ್ದನ್ನು ಮರೆತುಬಿಟ್ಟರಲ್ಲಾ? . .

ಶ್ರೀ ಎಸ್.ಎಂ. ಕೃಷ್ಣ : ಇದಕ್ಕೆ ತಳ ಇಲ್ಲ ಬುಡ ಇಲ್ಲ.

ಶ್ರೀ ಕೆ ಶ್ರೀನಿವಾಸ ಗೌಡ : ಇದಕ್ಕೆ ಚರಿತ್ರೆ ಇದೆ. ಮಾನ್ಯ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ 183 ಜನ ಸದಸ್ಯರು ಇದ್ದರು. .

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ರಾಜೀವ್ ಗಾಂಧಿಯವರು Anit- Defection Bill ತಂದರು. ಅದರಲ್ಲಿ ಟೆನ್ತ್ ಷೆಡ್ಯೂಲ್‌ನಲ್ಲಿ Anti Defection law ಅದರ ಭಾಗ ಆಗಿದೆಯೋ ಅಥವಾ ಹೊರಗಡೆ ಇದೆಯೋ? ಇದನ್ನು ಸ್ವಲ್ಪ ಅಧ್ಯಯನ ಮಾಡಿ ನನಗೆ ಅನಂತರ ಉತ್ತರ ಹೇಳಿ.

ಶ್ರೀ ಬಿ. ಸೋಮಶೇಖರ್ : ಕಾನೂನು ಒಂದು ಕಡೆ ಇದೆ. ನಮ್ಮ ಬುದ್ದಿವಂತಿಕೆಯಿಂದ ನಾವು ಎಷ್ಟೋ ಕಾನೂನುಗಳನ್ನು ತಿರುಚಿ ಸೆಲಟ್ಟರ್ ತೆಗೆದುಕೊಂಡಿರುವ ಉದಾಹರಣೆ ಉಂಟು. ನಾನು ನಿಮ್ಮನ್ನು ರಾಜಕಾರಣಿ ಎಂದು ತಿಲಿದುಕೊಂಡಿರಲಿಲ್ಲ. ನೀವು ಒಬ್ಬ ಸ್ಟೇಟ್‌ಮ್ಯಾನ್ ಎಂದು ತಿಳಿದುಕೊಂಡು ನಾನು ಮಾತನಾಡಿದೆ. ನೀವು ಒಬ್ಬ ಸಾಧಾರಣ ಮುಖ್ಯಮಂತ್ರಿ ಎಂದು ತಿಳಿದುಕೊಂಡಿದ್ದರೆ ಎಲ್ಲರೂ ಯಾವ ರೀತಿ ಮಾಡಿದ್ದಾರೋ ಅದೇ ರೀತಿ ಇವರು ಮಾಡಿದ್ದಾರೆಂದು ನಾನು ತಿಳಿದುಕೊಳ್ಳುತ್ತಿದ್ದೆ. ನೀವು ಒಬ್ಬ ಬುದ್ಧಿವಂತಹ ರಾಜಕಾರಣಿಗಳು, ನಿಮ್ಮ ಸ್ಟೇಟ್‌ಮೆಂಟ್‌ಗಳನ್ನು ನೋಡುತ್ತಿದ್ದರೆ, ಈ ವ್ಯವಸ್ಥೆಯನ್ನು ಬದಲಾವಣೆ ಮಾಡತಕ್ಕಂಥ ಆಸಕ್ತಿ, ಕಳಕಳಿಯನ್ನು ಇಟ್ಟುಕೊಂಡಿದ್ದಾರೆ, ಆಡಳಿತವನ್ನು ಪಾರದರ್ಶಕವಾಗಿ ಮಾಡುತ್ತಾರೆ, ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಆಡಳಿತದ ಪದ್ಧತಿಗೆ ಇವರು ಉತ್ತಮವಾದ ಆಡಳಿತ ಕೊಡುತ್ತಾರೆ, ಎಂದು ನಾವು ನಂಬಿಕೊಂಡಿದ್ದೆವು. ತಾಂತ್ರಿಕವಾಗಿ ನೀವು ಇದನ್ನು ಡಿಫೆಂಡ್ ಮಾಡಿಕೊಳ್ಳಬಹುದು. ಆದರೆ, ಒಬ್ಬ ಸ್ಟೇಟ್ಸ್‌ಮ್ಯಾನ್ ಆಗಿ ಇಂಥ ವಿಚಾರಗಳಲ್ಲಿ, ರಾಜ್ಯ ಸಭಾ ಚುನಾವಣೆಯ ಸಂದರ್ಭಕ್ಕಿಂತ ಮುಂಚಿತನವಾಗಿ ಬೇರೆ ಪಕ್ಷದವರನ್ನು ನಿಮ್ಮ ಪಕ್ಷಕ್ಕೆ ಸೇರಿಸಿಕೊಂಡಿದ್ದು ಕಾಕತಾಳೀಯವೋ? ಮತ್ತೊಂದು ಕಡೆ ಪತ್ರಿಕೆಗಳಲ್ಲಿ ಒಂದು ಕಮ್ಯುನಿಟಿಯಿಂದ ಮತ್ತೊಂದು ಕಮ್ಯುನಿಟಿಗಳಾಗಿ ಮಾಡಿ ಪ್ರತ್ಯೇಕ ಗುಂಪುಗಳಾಗಿ ಮಾಡಿ ಇದಕ್ಕೆ ಉತ್ತೇಜನ ಕೊಡುತ್ತಿರುವುದರ ಬಗ್ಗೆ ಬರೆದಿರುತ್ತಾರೆ. ಇವತ್ತು ನೀವು ಒಬ್ಬ ಸ್ಟೇಟ್ಸ್‌ಮ್ಯಾನ್ ಆಗಿ ಬುದ್ಧಿವಾದ ಹೇಳಬೇಕಾಗುತ್ತದೆ. ತಾವು ಆಡಳಿತದಲ್ಲಿ ಪಾರದರ್ಶಕತೆ ಎಂದು ಹೇಳಿದಿರಿ, ಹಸ್ತಕ್ಷೇಪ ಮಾಡುವುದಿಲ್ಲವೆಂದು ಹೇಳಿದಿರಿ, ಇದರ ಜೊತೆಗೆ ಮತ್ತೊಂದು ತಮ್ಮ ಹೇಳಿಕೆಯಲ್ಲಿ right to information ಪದ್ಧತಿ ತರುತ್ತೇನೆಂದು ಹೇಳಿದ್ದಿರಿ. ನಾನು ಇದನ್ನು ತಮ್ಮ ಬಜೆಟ್‌ನಲ್ಲಿ ನಿರೀಕ್ಷಣೆ ಮಾಡಿದ್ದೆ. ಇಂಥ ಉತ್ತಮವಾದ ಚಿಂತನೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಇರುವುದರಿಂದ ಇದು ಆಗಬೇಕು ಎಂದು ನಾನು ಅಂದುಕೊಂಡಿದ್ದೆ. ಏಕೆಂದರೆ, ಇವತುತ ಗುಟ್ಟಾಗಿ ಆಡಳಿತ ಮಾಡಿಕೊಂಡರೆ nepotism ಆಗುತ್ತದೆ, ಕಣ್ಣುಮುಚ್ಚಾಲೆ ಆಡಿದರೆ ಕರ್‌ವೆಷನ್ ಆಗುತ್ತದೆ. ಇವತ್ತು

ಪಾರದರ್ಶಕತೆ ಇದ್ದರೆ, ಯಾರು ಯಾವುದೇ ವಿಚಾರವನ್ನು ಯಾವ ರೀತಿಯಲ್ಲಿ ನೋಟ್ ಹಾಕಿದ್ದಾರೆ, ಯಾವ ಹಂತದಲ್ಲಿ ಯಾವ ಅಧಿಕಾರಿ ಯಾವ ಅಭಿಪ್ರಾಯ ಮಂಡಿಸಿದ್ದಾರೆ, ಎನ್ನುವುದನ್ನು ಪ್ರತಿಯೊಬ್ಬ ಸಾರ್ವಜನಿಕರು ನೋಡತಕ್ಕಂಥ ಅವಕಾಶ ದೊರಕಬೇಕು. ಈ ಕೆಲಸ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ನನಗೆ ಏನು ಅನ್ನಿಸುತ್ತದೆಂದರೆ, ಇವತ್ತು ಅಧಿಕಾರಿಗಳ ಒತ್ತಡಕ್ಕೆ ಮಣಿದು ಇದರ ಬಗ್ಗೆ ಯೋಚನೆಯೇ ಮಾಡಿಲ್ಲವೆಂದು ಕಾಣಿಸುತ್ತದೆ. ಆಡಳಿತದಲ್ಲಿ ಟ್ರಾನ್ಸ್‌ಫರೆನ್ಸಿ ಇರಬೇಕೆಂಬುದೆ ನನ್ನ ಆಸೆ. ಏಕೆಂದರೆ, you have got certain privileges and advantages which I don't have ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಅವರಿಗೆ ಕೆಲವು ಅವಕಾಶಗಳಿವೆ ಆದರೆ ನಮಗಿಲ್ಲ.

ಶ್ರೀ ಎಸ್.ಎಂ. ಕೃಷ್ಣ : ತಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಬಿಲ್‌ನ್ನು ನಮೂದು ಮಾಡಿದಿರಿ. We are committed to it. The Bill is being drafted.

+ಶ್ರೀ ಬಿ. ಸೋಮಶೇಖರ್ : ಅದನ್ನು ಆದಷ್ಟು ಬೇಗ ಮಾಡಬೇಕು. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಮುಖ್ಯ ಮಂತ್ರಿಗಳಾಗಿರುವ ಶ್ರೀದಿಗ್ವಿಜಯ್ ಸಿಂಗ್‌ರವರು ಹೋದ ಸಾರಿ ಇದನ್ನು ಅನುಷ್ಠಾನಕ್ಕೆ ತಂದು ಈ ಸಾರಿ ಕಾರ್ಯರೂಪಕ್ಕೆ ತಂದಿದ್ದಾರೆ. ಇದರಿಂದ ಅವರು ಎರಡನೇ ಸಾರಿ ಗೆದ್ದು ಬಂದರು. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಜನರು ನಿಮ್ಮ ಸರ್ಕಾರವನ್ನು ಅಧಿಕಾರಿರಕ್ಕೆ ತಂದಿರತಕ್ಕಂಥದ್ದು ನಿಮ್ಮ ಅದೃಷ್ಟ. ಏತಕ್ಕೆಂದು ನಾವು ತಿಳಿದುಕೊಳ್ಳಬೇಕೆಂದರೆ, ಜನರಿಗೆ ಒಳ್ಳೆಯ ಆಡಳಿತವನ್ನು ಕೊಡಬೇಕು, ಜನರ ಸೇವೆ ಮಾಡುವುದಕ್ಕೆ ನಾವು ಅಧಿಕಾರಕ್ಕೆ ಬಂದಿದ್ದೇವೆಂದು ನಾವು ತಿಳಿದುಕೊಳ್ಳಬೇಕು. ಆದರೆ ಇವತ್ತಿನದಿವಸ ಬಹುತೇಕ ನಮ್ಮ ಮಂತ್ರಿಗಳ ಭಾವನೆ ಏನಿದೆ ಎಂದರೆ, ಸರ್ಕಾರಕ್ಕೆ ಬಂದ ತಕ್ಷಣ ನನಗೆ ಬೇಕಾದದ್ದನ್ನು ಮಾಡಿಕೊಳ್ಳುವ ಅವಕಾಶ ಸಿಕ್ಕಿತ್ತು ಎಂಬ ಚಿಂತನೆಯಿಂದ ಸಾರ್ವಜನಿಕರಿಗೆ ಏನು ಮಾಡಬೇಕೆಂಬುದರ ಭಾವನೆ ಕಡಿಮೆಯಾಗುತ್ತಿದೆ. ಆದ್ದರಿಂದ, ಜನರ ಸೇವೆ ಮಾಡುವುದಕ್ಕೆ ಒಂದು ಅವಕಾಶ ದೊರಕಿದೆ ಎಂದು ತಿಳಿದುಕೊಂಡು ಯಾವುದೇ ಸರ್ಕಾರ ತನ್ನ ತತ್ವದ ಆಧಾರದ ಮೇಲೆ ಸರ್ಕಾರವನ್ನು ರಚನೆ ಮಾಡಿದ ಮೇಲೆ ಸಾರ್ವಜನಿಕರಲ್ಲಿ ಸರ್ಕಾರದ ಮೇಲೆ ಒಂದು ನಂಬಿಕೆ, ವಿಶ್ವಾಸ ಬರುತ್ತದೆ. ಅದೇನೆಂದರೆ, ಈ ಸರ್ಕಾರದಿಂದ ಹಿಂದೆ ಒಳ್ಳೆಯ ಕೆಲಸ ಏನಾಗಿತ್ತು ಅದಕ್ಕಿಂತ ಉತ್ತಮವಾದ ಕೆಲಸ ಈ ಸಾರಿ ಆಗುತ್ತದೆಂದು ಮತ್ತು ಪ್ರತಿಯೊಬ್ಬ ಸಾರ್ವಜನಿಕರು ತಾಲ್ಲೂಕು ಕಛೇರಿಗೆ ಹೋದಾಗ ಅಥವಾ ಪೋಲೀಸ್ ಸ್ಟೇಷನ್‌ಗೆ ಹೋದಾಗ ನನಗೆ ಕಾನೂನು ಬದ್ಧವಾಗಿ ರಕ್ಷಣೆ ಸಿಗುತ್ತದೆ ಎಂಬ ಭಾವನೆ ಬರುತ್ತದೆ. ಕಾನೂನು ಬಿಟ್ಟು ರಕ್ಷಣೆ ಸಿಗುತ್ತದೆಂದು ಯಾರು ನಿರೀಕ್ಷಣೆ ಮಾಡುವುದಿಲ್ಲ. ಹಾಗೆಯೇ ಪೋಲೀಸ್ ಸ್ಟೇಷನ್‌ಗೆ ಹೋಗಿ ನನ್ನ ಮೇಲೆ ದಬ್ಬಾಳಿಕೆ ಆಗಿದೆ ಎಂದು ದೂರು ಕೊಟ್ಟರೆ ಕೇಸ್ ದಾಖಲು ಮಾಡಿಕೊಳ್ಳುತ್ತಾರೆ ಎನ್ನತಕ್ಕಂಥ ಭಾವನೆ ಸಾರ್ವಜನಿಕರಿಗೆ ಬರುತ್ತದೆ. ಹಾಗೆಯೇ ತಾಲ್ಲೂಕು ಕಛೇರಿಗೆ ಹೋದಾಗ ನನಗೆ ಆರ್. ಟಿ. ಸಿ. ಸುಲಭವಾಗಿ ಸಿಗುತ್ತದೆ ಎನ್ನುವ ಭಾವನೆ ಬರುತ್ತದೆ. ಇದೊಂದು ಸಣ್ಣ ಒಂದು ವ್ಯವಸ್ಥೆಯಷ್ಟೆ. ಅಥವಾ ಇವತ್ತು ಕಾಂಗ್ರೆಸ್ ಬಂದಿರುವುದರಿಂದ ತಾಲ್ಲೂಕು ಕಛೇರಿಯಲ್ಲಿ ತಹಸೀಲ್ದಾರ್‌ರವರು ನನ್ನ ಕೆಲಸವನ್ನು ಮಾಡುವುದಿಲ್ಲ ಹಾಗೆಯೇ ಪೋಲೀಸ್ ಸ್ಟೇಷನ್‌ಗೆ ಹೋದರೆ ನನ್ನ ದೂರನ್ನು ತೆಗೆದುಕೊಳ್ಳುವುದಿಲ್ಲ ಎನ್ನತಕ್ಕಂಥ ಭಾವನೆ ಸಾರ್ವಜನಿಕರಿಗೆ ಬಂದರೆ ಸರ್ಕಾರ ತನ್ನ ನೈತಿಕತೆಯನ್ನೇ ಕಳೆದುಕೊಳ್ಳುತ್ತದೆ. ಇವತ್ತಿದಿವಸ ನಮ್ಮ ಸರ್ಕಾರ ಇರಬಹುದು ಅಥವಾ ನಿಮ್ಮ ಸರ್ಕಾರ ಇರಬಹುದು ಆದರೆ ಇವತ್ತು ಸಾರ್ವಜನಿಕರ ಜೀವನದಲ್ಲಿ ಒಳ್ಳೆಯ ಸಂಪ್ರದಾಯ ಇಲ್ಲದಂತಾಗಿದೆ. ಆದ್ದರಿಂದ ಇದನ್ನು ಮತ್ತೆ ನಿರ್ಮಾಣ ಮಾಡಬೇಕಾದರೆ ಅಡ್ಮಿನಿಸ್ಟ್ರೇಷನ್‌ನ್ನು ಇವತ್ತು

ಪೊಲಿಟಿಸೈಜ್‌ನಾಗಿ ಮಾಡಬಾರದು. ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ನೀವೇಕೆ ಮಾಡಲಿಲ್ಲವೆಂದು ನೀವು ಕೇಳ ಬಹುದು. ಇವತ್ತಿನದಿವಸ ಒಳ್ಳೆಯ ಕೆಲಸವನ್ನು ಮಾಡ ಬೇಕೆನ್ನುವವರು ಎಲ್ಲಾ ಪಕ್ಷದಲ್ಲಿದ್ದಾರೆ, ಆದರೆ ಕೆಲವು ಕಾರಣಗಳಿಂದ ಇವುಗಳನ್ನು ಮಾಡುವುದಕ್ಕಾಗುವುದಿಲ್ಲ. ಆಡಳಿತದಲ್ಲಿ ಹಸ್ತಕ್ಷೇಪ ಆಗುವುದಿಲ್ಲ ಮತ್ತು ಪೊಲಿಟಿಸೈಜ್ ಆಗಬಾರದೆಂದು ನೀವು ಹೇಳುತ್ತಾ ಬರುತ್ತಿದ್ದೀರಿ, ಇದು ಖಂಡಿತ ಆಗಬೇಕು. ಇದು ಆಗಬೇಕೆಂಬ ದೃಷ್ಟಿಯಿಂದ ಒಂದು ಹಳೆಯ ಶಿಫಾರಸ್ಸನ್ನು ಇಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅದೇನೆಂದರೆ, ಸಿವಿಲ್ ಸರ್ವೀಸ್ ಬೋರ್ಡ್ ಎಂದು ದೆಹಲಿಯಲ್ಲಿ ಕೇಂದ್ರ ಸರ್ಕಾರ ನೇತೃತ್ವದ ಒಂದು ಬೋರ್ಡ್ ಇದೆ. ಇದರ ಡಿಮ್ಯಾಂಡ್‌ನಿಂದ ನಮ್ಮ ರಾಜ್ಯದಲ್ಲಿ ನಾವು 5ನೇ ವೇತನ ಆಯೋಗವನ್ನು ಜಾರಿಗೆ ತಂದು ಎಲ್ಲರಿಗೂ ಸ್ಕೇಲರಿ ಕೊಟ್ಟಿದ್ದೇವೆ. ಈ ಬೋರ್ಡ್‌ನಲ್ಲಿ ಕೇಂದ್ರ ಸರ್ಕಾರದ ಕ್ಯಾಬಿನೆಟ್ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮತ್ತು ಇಬ್ಬರು ಹಿರಿಯ ಕಾರ್ಯದರ್ಶಿಯವರು ಸೇರಿ ಇದನ್ನು ರಚನೆ ಮಾಡಿರುತ್ತಾರೆ. ಇವತ್ತಿನದಿವಸ ಅಲ್ಲಿ ಎಲ್ಲಾ ಪೋಸ್ಟಿಂಗ್‌ಗಳನ್ನು ಮಂತ್ರಿಗಳು ಮಾಡುವುದಿಲ್ಲ. ಅದೇ ರೀತಿ ಇಲ್ಲಿಯೂ ಸಹ ಒಂದಿ ಸಿವಿಲ್ ಸರ್ವೀಸ್ ಬೋರ್ಡ್‌ನ್ನು ಜಾರಿಗೆ ತರಬೇಕು. Postings should be done only by officers. You give them guide lines. You give them directions. You frame policies .ಯಾವ್ಯಾವ ಹಂತದ ಅಧಿಕಾರಿಗಳು ಎಲ್ಲೆಲ್ಲಿ ಎಷ್ಟೆಷ್ಟು ವರ್ಷ ಇರಬೇಕೆಂದು ಒಂದು ಗೈಡ್‌ಲೈನ್ಸ್ ಮಾಡಿ. ಇದನ್ನು ಮಾಡಿದ ಮೇಲೆ ಅಧಿಕಾರಿಗಳು ಎಲ್ಲಿ ತಪ್ಪು ಮಾಡುತ್ತಾರೆಂದು ತಿಳಿದುಕೊಂಡು ಆ ತಪ್ಪಿಗೆ ಅವರನ್ನೇ ಹೊಣೆಗಾರರನ್ನಾಗಿ ಮಾಡಿ. ನೀವು ಆಡಳಿತದಲ್ಲಿ ಪಾರದರ್ಶತೆ ಮತ್ತು ನಿಷ್ಪಕ್ಷಪಾತವಾದ ಆಡಳಿತವನ್ನು ಕೊಡುವುದಕ್ಕೆ ಇದೊಂದು ಒಳ್ಳೆಯ ಹೆಜ್ಜೆಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇವತ್ತು ಆಡಳಿತದಲ್ಲಿ ಏನಾಗಿದೆ ಎಂದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ನಮಗೆ ಬೇಕಾದ ಅಧಿಕಾರಿಗಳನ್ನು ಹಾಕಿಸಿಕೊಳ್ಳಬಹುದೆಂದು ಎಂಎಲ್‌ಎ ಗಳು ಯೋಚನೆ ಮಾಡುವುದನ್ನು ಹಾಗೂ ಮಂತ್ರಿಗಳ ಜಾತಿಗೆ ಸೇರಿರತಕ್ಕಂಥ ಅಧಿಕಾರಿಗಳು ನಮಗೆ ಒಳ್ಳೆಯ ಪೋಸ್ಟಿಂಗ್ ಸಿಗುತ್ತದೆ ಎನ್ನತಕ್ಕಂಥ ಭಾವನೆಗಳೆಲ್ಲವೂ ಇವತ್ತಿನದಿವಸ ಹೋಗಬೇಕು. ಇವತ್ತಿನದಿವಸ ಎಲ್ಲಾ ಇಲಾಖೆಗಳಲ್ಲಿ ಅಬಲಾಧಿಕಾರಿಗಳು ಮತ್ತು ದಿಕ್ಕುದೆಸೆ ಇಲ್ಲದೇ ಇರತಕ್ಕಂಥ ಅಧಿಕಾರಿಗಳು ಇದ್ದಾರೆ. ಇವರಿಗೆ ಯಾವುದೇ ಸರ್ಕಾರ ಬರಲಿ ಅವರು ನಾನ್-ಎಗ್ಸಿಕ್ಯೂಟೀವ್‌ನಲ್ಲಿಯೇ ಇರುತ್ತಾರೆ, ಅವರಿಗೆ ಒಳ್ಳೆಯ ಪೋಸ್ಟಿಂಗ್ಸ್ ಸಿಗುವುದಿಲ್ಲ ಮತ್ತು ಅವರು ಕೇಳಿದಂಥ ಸ್ಥಳಕ್ಕೆ ಕೊಡುವುದಿಲ್ಲ, ಕೆಲವರಂತು ನಮ್ಮ ಸರ್ಕಾರ ಇದ್ದರು ಅವರೇ ಇರುತ್ತಾರೆ, ನಿಮ್ಮ ಸರ್ಕಾರ ಇದ್ದರು ಅವರೇ ಇರುತ್ತಾರೆ. ಇವರಿಗೆ ಯಾವುದೆ ಒಂದು ನಾರ್ಮ್ಸ್ ಆಗಲಿ ಗೈಡ್‌ಲೈನ್ಸ್ ಆಗಲಿ ಅಥವಾ ನೀತಿ ನಿಯಮವಾಗಲಿ ಇರುವುದಿಲ್ಲ. ಇದರಿಂದ ಕೆಲವರಿಗೆ ಸರ್ಕಾರದ ಬಗ್ಗೆ ವಿಶ್ವಾಸ ಬರುವುದಿಲ್ಲ. ಈ ಸರ್ಕಾರ ಬಂದಾಗ ನಾನು ಒಳ್ಳೆಯ ಸೇವೆ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲವೆಂದು ಕೆಲವು ಅಧಿಕಾರಿಗಳು ಹೊರಕ್ಕೆ ಬರುವುದಕ್ಕಾಗದೇ ನಿರಾಶೆಯಾಗಿ ಅಲ್ಲಿಯೆ ಇರುತ್ತಾರೆ. ಇದನ್ನು ನೋಡತಕ್ಕಂಥ ಜವಾಬ್ದಾರಿ ಇವತ್ತಿನ ದಿವಸ ಸರ್ಕಾರಕ್ಕೆ ಇದೆ. ಮತ್ತೆ ಇವತ್ತಿನದಿವಸ ಲೋಕಾಯುಕ್ತ ಹಾಗೂ ಕೆಲವು ಸಮಿತಿಗಳು ವಿಚಾರಣೆ ಮಾಡಿ ವರದಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಲೋಕಾಯುಕ್ತ ಎಷ್ಟೋ ವರದಿಗಳನ್ನು ಕೊಟ್ಟಿದ್ದರು ಸಹ ಕೆಲವುಗಳ ಮೇಲೆ ಇನ್ನು ಯಾವುದೇ ರೀತಿಯ ಕ್ರಮವನ್ನು ಕೈಗೊಂಡಿಲ್ಲ. ಕೆಲವು ಅಧಿಕಾರಿಗಳ ಮೇಲೆ ಸದನ ಸಮಿತಿ ಹಾಗೂ ಲೋಕಾಯುಕ್ತ ಮತ್ತು ನ್ಯಾಯಾಂಗ ತನಿಖೆ ಮಾಡಿ ವರದಿಗಳನ್ನು ಕೊಟ್ಟಿದ್ದಾರೆ. ಇವತ್ತಿನದಿವಸ ಇಂಥ ಅಧಿಕಾರಿಗಳ ಮೇಲೆ ಸರ್ಕಾರ ಏನಾದರೂ ಕ್ರಮ ತೆಗದುಕೊಂಡಿದೆಯೆ? ಇದರ

ಬಗ್ಗೆ ಏನಾದರೊಂದು ರ್ಯಾಶನಲ್ ಇದೆಯೆ? ಇವತ್ತಿನದಿವಸ ಆಡಳಿತದಲ್ಲಿ ಏನಾಗಿದೆ ಎಂದರೆ, ಕೆಲವರನ್ನು pick and choose ಪ್ರಕಾರ ರಾಜಕೀಯ ಶಕ್ತಿ ಇಲ್ಲದೇ ಇರತಕ್ಕಂಥ ಅಲಬರು ಯಾರಿದ್ದಾರೆ ಅವರಿಗೆ ಇವತ್ತು ನನ್ನನ್ನು ಎಲ್ಲಿಗೆ ವರ್ಗಾವಣೆ ಮಾಡುತ್ತಾರೋ ಅಥವಾ ಎಲ್ಲಿ ನನ್ನ ಮೇಲೆ ವಿಚಾರಣೆ ಮಾಡಿದಂಥ ವರದಿಯನ್ನು ಅನುಷ್ಠಾನಕ್ಕೆ ತರುತ್ತಾರೋ ಎಂಬ ಭಯವಿರುತ್ತದೆ. ಇನ್ನು ಕೆಲವರು ಹತ್ತಾರು ವರ್ಷಗಳ ಹಿಂದೆ ನನ್ನನ್ನು ವಿಚಾರಣೆ ಮಾಡಿ ರಿಪೋರ್ಟ್ ಕೊಟ್ಟಿದ್ದಾರೆ, ಆದರೂ ಸಹ ನನ್ನ ಮೇಲೆ ಕ್ರಮ ತೆಗೆದುಕೊಂಡಿಲ್ಲವೆಂದು ಹಾಗೆಯೇ ಅಲ್ಲಿಯೆ ಉಳಿದುಕೊಳ್ಳುತ್ತಾರೆ. ಇವತ್ತಿನದಿವಸ ಸರ್ಕಾರದ ಮುಂದೆ ಎಷ್ಟು ವರ್ಷಗಳಿಂದ ಕೆಲವು ವಿಚಾರಣೆ ಆಗಿರತಕ್ಕಂಥ ವರದಿಗಳಿವೆ? ಇದರ ಬಗ್ಗೆ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ? ಹಿಂದೆ ಯಾರು ತೆಗೆದುಕೊಂಡಿಲ್ಲವೆಂದು ಹೇಳುವುದು ಬೇರೆ ಪ್ರಶ್ನೆ. ಮೊದಲು ನೈತಿಕತೆ ಬ್ಯೂರಾಕ್ರಸಿಯಲ್ಲಿ ಬರಬೇಕು. ಇವತ್ತು ಎಲ್ಲರೂ ನಮ್ಮನ್ನು ಕೇಳುತ್ತಾರೆ, ಏಕೆಂದರೆ, ಅಧಿಕಾರಿಗಳು ಸುಮಾರು 30 ರಿಂದ 35 ವರ್ಷಗಳ ಕಾಲ ಅಧಿಕಾರಿದಲ್ಲಿರುತ್ತಾರೆ. ಪ್ರಿನ್ಸಿಪಲ್ ಆಫ್ ನ್ಯಾಚುರಲ್ ಜಸ್ಟೀಸ್. ಫೇರ್‌ನೆಸ್ ಮತ್ತು ಆಬ್ಜೆಕ್ಟಿನಿಟಿ, ಈ ರೀತಿಯಾಗಿ ಕೆಲಸ ಮಾಡತಕ್ಕಂಥ ಅಧಿಕಾರಿಗಳು ನಿರ್ಭೀತಿಯಾಗಿ ಕೆಲಸ ಮಾಡತಕ್ಕಂಥ ವಾತಾವರಣ ಇದ್ದಾಗ ನ್ಯಾಯ ಮತ್ತು ಮೌಲ್ಯಗಳು ಅಲ್ಲಿ ಇರಬೇಕಾಗುತ್ತದೆ. ಇವತ್ತಿನದಿವಸ ಲೋಕಾಯುಕ್ತರಿಂದ ಮತ್ತು ಸದನ ಸಮಿತಿ ಅಧಿಕಾರಿಗಳನ್ನು ವಿಚಾರಣೆ ಮಾಡಿ ವರದಿಯನ್ನು ಕೊಟ್ಟಿದೆ. ಈ ಎಲ್ಲಾ ವರದಿಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ ಎಂದು ನಾನು ಪ್ರಶ್ನೆ ಮಾಡುತ್ತಿದ್ದೇನೆ? ಮುಖ್ಯ ಕಾರ್ಯದರ್ಶಿ ಅಥವಾ ನಿಮ್ಮ ಕಾರ್ಯದರ್ಶಿಯವರಿಗೆ ಯಾರು ಬೇಡವೊ ಅಂಥವರ ಮೇಲೆ ಕ್ರಮ ತೆಗೆದುಕೊಂಡು ಸಸ್ಪೆಂಡ್ ಮಾಡುತ್ತೀರಿ, ಏಕೆಂದರೆ ಇವರಿಗೆ ಯಾರ ಬೆಂಬಲ ಇರುವುದಿಲ್ಲ. ಯಾರಿಗೆ ಶಕ್ತಿ ಇದೆ ಮತ್ತು ಬೆಂಬಲವಿರುತ್ತದೆ ಅಂಥವರ ರಿಪೋರ್ಟ್ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಇಂಥ ನಿದರ್ಶನಗಳು ಇವತ್ತಿನದಿವಸ ಬಹಳಷ್ಟಿವೆ, ತಾವು ಬೇಕಾದರೆ ನೋಡಬಹುದು. ಇವತ್ತಿನದಿವಸ ವಿಚಾರಣೆಯಾಗಿರತಕ್ಕಂಥ ಎಲ್ಲಾ ರಿಪೋರ್ಟ್‌ಗಳು ಕ್ಯಾಬಿನೆಟ್‌ಗೆ ಬರುವುದಿಲ್ಲ. ಇವತ್ತು ಬ್ಯೂರಾಕ್ರಸಿಯಲ್ಲಿ ನೈತಿಕತೆ ಇಲ್ಲದೇ ಇದ್ದರೆ ಏನಾಗುತ್ತದೆಂದರೆ, ಇವತ್ತು ನ್ಯಾಯಾಂಗ ತನಿಖೆಯ ರಿಪೋರ್ಟ್‌ಗಳು ಬಂದಿವೆ, ಇವುಗಳ ಬಗ್ಗೆ ಕ್ರಮ ತೆಗೆದುಕೊಳ್ಳದೆ ಹಾಗೆ ಇರತಕ್ಕಂಥ ಕೆಲವು ವರದಿಗಳು ಬಹಳಷ್ಟಿವೆ. ಉದಾಹರಣೆಗೆ ಹೇಳುವುದಾದರೆ, ನನ್ನ ಮೇಲೆ ಸಹ ನ್ಯಾಯಾಂಗ ತನಿಖೆ ಆಯಿತು ; ನ್ಯಾಯಂಆಗ ತನಿಖಾ ವರದಿ ಬರುವವರೆಗೆ ನಾನು ಹೊರಗಡೆ ಇದ್ದು ಆ ರಿಪೋರ್ಟ್‌ನ್ನು ಕ್ಯಾನಿಬಿನೆಟ್ ಇತ್ಯರ್ಥ ಮಾಡಿದ ಮೇಲೆ ನಾನು ನಿರ್ದೋಷಿ ಎಂದು ಸಾಬೀತು ಆದಮೇಲೆ ನಾನು ಮತ್ತೆ ಕ್ಯಾಬಿನೆಟ್‌ಗೆ ಬಂದೆ. ಮುಖ್ಯ ಕಾರ್ಯದರ್ಶಿಗಳ ಮೇಲೆ ಜ್ಯುಡಿಷಿಯಲ್ ಎನ್‌ಕ್ವಯರಿ ಇಂಡಕ್ಟ್‌ಮೆಂಟ್ ಇದೆ ಆದರೂ ನೀವ್ಯಾಕೆ ಅವರನ್ನು ಮುಖ್ಯ ಕಾರ್ಯದರ್ಶಿಯವರನ್ನಾಗಿ ಮಾಡಿದ್ದೀರಿ ಎಂದು ತಾವು ಕೇಳಬಹುದು? ಆದರೆ, ನಾನು ಇಲ್ಲಿ ಕೇಳುವುದೇನೆಂದರೆ, ನಾವು ಮಾಡಿದ ಮೇಲೆ ಮತ್ತೆ ನೀವ್ಯಾಕೆ ಮುಂದುವರಿಸಿದಿರಿ? ಜ್ಯುಡಿಷಿಯಲ್ ಇಂಡಕ್ಟ್‌ಮೆಂಟ್ ನೀವು ಮುಂದುವರಿಸುವುದಾದರೆ ನೀವು ಯಾವ ಒಂದು ನೈತಿರಕವಾದಂಥ ಸರ್ಕಾರ ಕೊಡುತ್ತೀರೆಂದು ಈ ಸಂದರ್ಭದಲ್ಲಿ ಕೇಳತಕ್ಕಂಥ ಪರಿಸ್ಥಿತಿ ಇವತ್ತು ಬಂದಿದೆ. ಒಳ್ಳೆಯ ಅಧಿಕಾರಿಗಳನ್ನು ಎಲ್ಲಿ ಬೇಕಾದರು ಹಾಸಿಕಿಕೊಳ್ಳಿ, ಆದರೆ ಯಾರು ಸರಿ ಇಲ್ಲವೊ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಸದಾನಂದಗೌಡರು ಮಾತನಾಡುನಂಥ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ಹೇಳುತ್ತಾ ಅಧಿಕಾರಿ ಹೆಸರುಗಳ ಪಟ್ಟಿಯನ್ನು ಓದಿದರು. ಇವತ್ತು ಆಡಳಿತದಲ್ಲಿ ಅಧಿಕಾರಿ ಶಾಹಿಗೆ ಹೆದರಿಕೆ ಇಲ್ಲದಂತಾಗಿದೆ. ಅವರಿಗೂ ಮತ್ತು ನಮಗೂ ಇದರ ಅನುಭವವಾಗಿದೆ ಮತ್ತು ಆಡಳಿತದಲ್ಲಿರತಕ್ಕಂಥ ಮಂತ್ರಿಗಳಿಗೂ ಇದರ ಅನುಭವವಾಗಿರುತ್ತದೆ. ಇವತ್ತಿನದಿವಸ ಅಧಿಕಾರಿ ಶಾಹಿಗೆ ಯಾವುದೇ ರೀತಿಯ ಭಯಭೀತಿ

ಇಲ್ಲದಂತಾಗಿರುವ ಒಂದು ವರ್ಗವಾಗಿದೆ. ಯಾವುದೇ ಸರ್ಕಾರ ಬಂದರು ಸಹ ಮಂತ್ರಿಗಳನ್ನು ಅವರು ಸ್ಕೇಪ್-ಗೋಟ್ ಮಾಡುತ್ತಾರೆಯೇ ಹೊರತು ಅವರಿಗೆ ಯಾವುದೇ ರೀತಿಯ ಅನಾನುಕೂಲವಾಗುವುದಿಲ್ಲ. ಇವತ್ತು ಕೆಲವು ಜನ ನಾಮಕಾವಾಸ್ತೆ ಮಂತ್ರಿಗಳಾಗಿದ್ದಾರೆ. ಇದರ ಬಗ್ಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಬಹಳ ತೀಕ್ಷ್ಣಗತಿಯಿಂದ ಚಿಂತನೆ ಮಾಡಬೇಕಾಗಿದೆ. ನಿಜವಾಗಲೂ ಪ್ರಜಾಪ್ರಭುತ್ವದ ಅರಿವು ಉಳಿವು ಇವತ್ತು ಆಡಳಿತದಲ್ಲಿ ಇದೆ. ಯಾವ ಸರ್ಕಾರ ಉತ್ತಮವಾದ ಆಡಳಿತವನ್ನು ಕೊಡುತ್ತದೆಂದರೆ, ಅಧಿಕಾರಿಶಾಹಿಯನ್ನು ನಿಯಂತ್ರಣದಲ್ಲಿಟ್ಟಾಗ, ನಿಯಂತ್ರಣದಲ್ಲಿಡುವುದನ್ನು ಯಾವ ಸರ್ಕಾರ ಮಾಡುತ್ತದೆ ಆ ಸರ್ಕಾರ ಉತ್ತಮವಾದ ಆಡಳಿತವನ್ನು ಕೊಡುತ್ತದೆ. ಇವತ್ತು ನಾನು ನಿಮ್ಮನ್ನು ಕೇಳುತ್ತೇನೆ, ಸಚಿವ ಸಂಪುಟದಲ್ಲಿ ತೀರ್ಮಾನ ಆಗಿರುವಂತದ್ದನ್ನು ರಿವರ್ಸ್ ಮಾಡಿರುವಂತಹ ಅಧಿಕಾರಿಗಳು ಬಹಳ ಜನ ಇದ್ದಾರೆ. ಸಚಿವ ಸಂಪುಟ ತೀರ್ಮಾನ ಮಾಡಿದ್ದನ್ನು ಯಾವ ಮತ್ರಿಗೂ ಅದನ್ನು ತಿರುಚತಕ್ಕಂಥ ಅಧಿಕಾರ ಇಲ್ಲ. ಅದು ಮತ್ತೆ ಸಚಿವ ಸಂಪುಟಕ್ಕೆ ಹೋಗಬೇಕು. ಆದರೆ ಇವತ್ತು ಅಂತಹ ತೀರ್ಮಾನ ಮಾಡಿದ ಅಧಿಕಾರಿಗಳ ಮೇಲೆ ಯಾವ ಕ್ರಮ ಇಲ್ಲ. ಇವತ್ತು ನೀವು ಒಂದು ಕಡೆ ಹೇಳುತ್ತೀರಿ, ಆಡಳಿತ ವಿಕೇಂದ್ರೀಕರಣ ಆಗಬೇಕು. ಇವತ್ತು ನಾನ್ ಪ್ಲಾನ್ ಎಕ್ಸಪೆಂಡಿಚರ್ ಜಾಸ್ತಿಯಾಗುತ್ತದೆ, ಅದನ್ನು ಕಡಿತ ಮಾಡಬೇಕು ಎನ್ನುವುದನ್ನು ತಾವು ಹೇಳುತ್ತೀರಿ. ನಾನ್ ಪ್ಲಾನ್ ಎಕ್ಸಪೆಂಡಿಚರ್ ಇವತ್ತು ವರ್ಷೇ ವರ್ಷೇ ದಿನೇ ದಿನೇ ಮೇಲಕ್ಕೆ ಹೋಗುತ್ತಿದೆ. ಓವರ್‌ಹೆಡ್ ಕಾಸ್ಟ್ ಏನಾಗಿದೆ. ಡೆಲಿವರಿ ಕಾಸ್ಟ್ ನಮಗೆಲ್ಲ ಗೊತ್ತಿದೆ, ಬಜೆಟ್‌ನಲ್ಲಿ ನೂರು ರೂಪಾಯಿಗಳನ್ನು ಅವಕಾಶ ಮಾಡಿಕೊಟ್ಟರೆ ಸಾರ್ವಜನಿಕರಿಗೆ ತಲುಪುವಂತದ್ದು ಕೇವಲ 30-35 ರೂಪಾಯಿಗಳು ಮಾತ್ರ. ಇನ್ನುಳಿದ 65-70 ರೂಪಾಯಿ ಡೆಲಿವರಿ ಕಾಸ್ಟ್ ಅಧಿಕಾರಿಗಳ ಟಿಎ ಡಿಎ ಸಭೆಯ ಎಕ್ಸಪೆಂಡಿಚರ್ ಹಾಗೂ ಸಂಬಳ ಬೇರೆ ಬೇರೆ ಕಾಸ್ಟ್ ಆಗುತ್ತದೆ. ಇದನ್ನು ಯಾವ ರೀತಿಯಲ್ಲಿ ಕಡತವನ್ನು ಮಾಡಬೇಕು. ಅದರ ಬಗ್ಗೆ ನೀವು ಏನಾದರೂ ಯೋಚನೆಯನ್ನು ಮಾಡಿರುತ್ತೀರಾ? ಈ ಬಜೆಟ್‌ನಲ್ಲಿ ನೀವು ಯಾವುದೇ ರೀತಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿರುವುದಿಲ್ಲ. ಇದು ಅಲ್ಲದೆ ನೀವು ಇವತ್ತು ದೊಡ್ಡ ದೊಡ್ಡ ಹಂತದಲ್ಲಿ ಪ್ರಮೋಶನ್ ಕೊಡುತ್ತಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ತರಿಸಿ ನೋಡಬೇಕು. ಒಬ್ಬ ಅಧಿಕಾರಿ ಸುಮಾರು 600 ಕಡತಗಳನ್ನು ಸ್ವೇಚ್ಛಾಚಾರವಾಗಿ ಕಾನೂನು ಬಾಹಿರವಾಗಿ ತೀರ್ಮಾನ ಮಾಡಿದ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಬರೆದರೆ ಆ ಕಡತವೇ ಇಲ್ಲ. ಅದನ್ನು ಎಲ್ಲಿಯೋ ಮುಚ್ಚಿ ಇಟ್ಟಿದ್ದಾರೆ. ಅಂತಹವರ ಬಗ್ಗೆ ನಾವು ಪೋಸ್ಟಿಂಗ್ ಕೊಡದೇ ಮೇಲಕ್ಕೆ ಕಳುಹಿಸಿದರೆ ನೀವು ವರಿಗೆ ಪದೋನ್ನತಿ ಕೊಟ್ಟು ಬ್ಬಮಂತ್ರಿಗಳ ಮೇಲೆ ಹಾಗೂ ಕಾರ್ಯದರ್ಶಿಗಳ ಮೇಲೆ ಅಡಿಷನಲ್ ಸೆಕ್ರೆಟರಿಯಾಗಿ ಇಡುತ್ತೀರಿ. ಇದರಲ್ಲಿ ಯಾವ ರ್ಯಾಷನಲ್ ಇದೆ? ತಪ್ಪು ಮಾಡದಂಥ ಅಧಿಕಾರಿಗೆ ನೀವು ಪ್ರಮೋಶನ್ ಕೊಟ್ಟು ಒಬ್ಬ ಮಂತ್ರಿಯ ಮೇಲೆ ಇಟ್ಟರೆ ಆ ಅಧಿಕಾರಿಯನ್ನು ಮಂತ್ರಿಗಳು ಕಂಟ್ರೋಲ್ ಮಾಡುವುದಕ್ಕಾಗುತ್ತದೆಯೇ ಅದನ್ನು ತಾವು ಯೋಚನೆ ಮಾಡಬೇಕು. ಯಾವ ಅಧಿಕಾರಿಗಳನ್ನು ಎದುರು ಹಾಕಿಕೊಳ್ಳುವಂತಹ ಪರಿಸ್ಥಿತಿ ಮಂತ್ರಿಗಳಿಗೆ ಅಗಲಿ ಅಥವಾ ಮಾನ್ಯ ಮುಖ್ಯಮಂತ್ರಿಗಳಿಗೆ ಆಗಲಿ ಇವತ್ತು ಇಲ್ಲ. ಇದನ್ನು ಮಾಡದೇ ಇದ್ದರೆ ನಿಮ್ಮಿಂದ ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್.ಎಂ. ಕೃಷ್ಣ : ತಾವು ನನ್ನ ಬಗ್ಗೆ ಹೇಳುತ್ತಿದ್ದೀರಾ?

ಶ್ರೀ ಬಿ. ಸೋಮಶೇಖರ್ : ನೀವಾಗಲಿ ಅಥವಾ ನಾವೇ ಅಗಲಿ, ಯಾರಿಂದ ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಸ್.ಎಂ. ಕೃಷ್ಣ: ಅಧಿಕಾರಶಾಹಿ ಮಂತ್ರಿಮಂಡಲದ ಮಂತ್ರಿಗಳು ಹಾಗೂ ಮುಖ್ಯಮಂತ್ರಿಯ ಮುಷ್ಠಿಯಲ್ಲಿ ಇರಬೇಕೇ ಹೊರತು, ಅಧಿಕಾರಿಗಳ ಮುಷ್ಠಿಯಲ್ಲಿ ಮುಖ್ಯಮಂತ್ರಿಗಳು ಸಿಕ್ಕಿದ್ದಾರೆ ಎನ್ನುವ ಮಾತನ್ನು ಹೇಳುತ್ತಿದ್ದೀರಾ ಹೇಗೆ?

ಶ್ರೀ ಬಿ. ಸೋಮಶೇಖರ್ : ಅಧಿಕಾರಶಾಹಿ ಇವತ್ತು ಎಲ್ಲಿಯವರೆಗೆ ಹೋಗಿದೆ ಎಂದರೆ ಯಾವ ಒಂದು ಸಚಿವ ಸಂಪುಟದ ತೀರ್ಮಾನವಾಗಿರುತ್ತದೆ. ಇದನ್ನು ನಾನು ಜನರಲ್ ಆಗಿ ಹೇಳುತ್ತೇನೆ ತಾವು ಸೆಟ್ರೈಟ್ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ: ಓಕೆ ರೈಟ್ you are on the right track.

SRI B. SOMASHEKAR: I am speaking generally. I am not blaming you. You are not responsible. ನಾನು ಆಕೆ ಹೇಳುತ್ತಿದ್ದೇನೆಂದರೆ, ನೀವು ಆ ರೀತಿ ಮಾಡುತ್ತೇನೆಂದು ತಿಳಿದಿಕೊಂಡಿದ್ದರೆ ಈಗ ಕಳೆದ 5-6 ತಿಂಗಳುಗಳ ನಡವಳಿಕೆಗಳನ್ನು ನೋಡಿದಲೆ, ನೀವು ಅದೇ ದಾರಿಯಲ್ಲಿ ಹೋಗುತ್ತಿದ್ದೀರಿ ಎಂದು ನನಗೆ ಭಯವಾಗುತ್ತಿದೆ.

ಶ್ರೀ ಎಸ್.ಎಂ. ಕೃಷ್ಣ : ಯಾವುದನ್ನು ತಾವು ಹೇಳುತ್ತಿದ್ದೀರಿ.

ಶ್ರೀ ಬಿ. ಸೋಮಶೇಖರ್ : ಒಬ್ಬ ಅಧಿಕಾರಿ ಮೇಲೆ ತೀಕ್ಷ್ಣವಾದ ರಿಮಾರ್ಕ್ಸನ್ನು ಪಾಸ್ ಮಾಡಿದ್ದೇನೆ, 618 ಕಡತವನ್ನು ಸ್ವೇಚ್ಚಾಚಾರದಿಂದ ಯಾವ ಒಂದು ಆಥಾರಿಟಿ ಇಲ್ಲದೆ ತೀರ್ಮಾನ ತೆಗೆದುಕೊಂಡ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ನಾನು ರೆಕಾರ್ಡ್ ಮಾಡಿದ್ದೇನೆ ಆ ಕಡತವನ್ನು ಇವತ್ತು ಮುಚ್ಚಿಟ್ಟಿದ್ದಾರೆ. ಅವರನ್ನು ಅಡಿಷನಲ್ ಚೀಫ್ ಸೆಕ್ರೆಟರಿಯನ್ನು ಒಬ್ಬ ಸೆಕ್ರೆಟರಿಯ ಮೇಲೆ ಹಾಕಿರುತ್ತೀರಿ. ಇನ್ನೊಂದನ್ನು ಹೇಳಿದ್ದಾರೆ ಯಾವ ಒಬ್ಬ ಅಧಿಕಾರಿ ತನ್ನ ಅಧಿಕಾರ ಇಲ್ಲದೇ ಬ್ಯಾಂಕಿನಲ್ಲಿ ಹಣ ಇಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಇದ್ದರೂ ಕೂಡ ಅಂತಹವರ ಬಗ್ಗೆ ಯಾವ ಕ್ರಮ ಇರುವುದಿಲ್ಲ. ಬಹಳ ಒಳ್ಳೆಯ ಅಧಿಕಾರಿಗಳು ಇದ್ದಾರೆ. ನಾನು ಇಲ್ಲವೆಂದು ಹೇಳುವುದಿಲ್ಲ. ವರ್ಲ್ಡ್ ಬ್ಯಾಂಕ್‌ನಿಂದ ಒಂದು ವರ್ಷದಲ್ಲಿ ಆಸ್ಪತ್ರೆಗಳನ್ನು ಕಟ್ಟುವ ಸಲುವಾಗಿ ಒಂದು ಸ್ಕೀಂ ಬಂತು, ನಮ್ಮ ಸರ್ಕಾರದಲ್ಲಿ ಅದನ್ನು ನಾವು ಮಾಡಿದೆವು. ಅಲ್ಲಿ ಒಬ್ಬ ಸುಬ್ರಮಣ್ಯ ಎಂದುಅಧಿಕಾರಿ ಇದ್ದರು. ಒಂದೇ ವರ್ಷದಲ್ಲಿ ಎಲ್ಲಾ ತಾಲ್ಲೂಕಿನ ಆಸ್ಪತ್ರೆಗಳನ್ನು ಅವರು ಒಳ್ಳೆಯ ಉತ್ತಮವಾದ ಕಟ್ಟಡವನ್ನು ಕಟ್ಟಿಸಿದ್ದಾರೆ ಅವರು ಒಳ್ಳೆಯ, ಉತ್ತಮವಾದ ಅಧಿಕಾರಿ ಎಂದು ನಾವು ಮೆಚ್ಚಿಕೊಂಡಿದ್ದೇವೆ. ಅಂತಹ ಅಧಿಕಾರಿಗಳು ಬಹಳ ಜನ ಇದ್ದಾರೆ, ನಾನು ಇಲ್ಲವೆಂದು ಹೇಳುವುದಿಲ್ಲ. ನಿಮ್ಮ ಸುತ್ತ ಮುತ್ತ ಯಾರು ಓಡಾಡುತ್ತಿದ್ದರೋ ಅವರೇ ಇವತ್ತು ನಿಮ್ಮ ಸುತ್ತಮುತ್ತ ಓಡಾಡುತ್ತಿದ್ದಾರೆ. Don't become a victim of lobby.

ಶ್ರೀ ಎಂ. ಮಹದೇವ್ (ರೇಷ್ಮೆ ಸಚಿವರು) : ಅಂತಹ ಅಧಿಕಾರಿಗಳು ಬಿಟ್ಟು ಬೇರೆ ಏನಾದರೂ ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆಯೋ ಎಂದು ದಯವಿಟ್ಟು ಹೇಳುತ್ತೀರಾ?

ಶ್ರೀ ಬಿ. ಸೋಮಶೇಖರ್ : ಅದಕ್ಕಾಗಿ ನಾನು ನಿಮಗೆ ಹೇಳುತ್ತಿರುವುದು, ಕೆಲವು ಅಧಿಕಾರಿ ವರ್ಗ ಇದೆ. ಯಾವುದೇ ಸರ್ಕಾರ ಬಂದರು ಸಹ ಅವರು, ಇಲ್ಲಿಯೇ ಸೇರಿಕೊಳ್ಳುವಂತಹವರು ಇದ್ದಾರೆ. ಯಾವ ಒಬ್ಬ ಮುಖ್ಯ ಮಂತ್ರಿಯಾಗಲಿ, ಅಥವಾ ಮಂತ್ರಿಯಾಗಲಿ If he becomes a victim of lobby.

he cannot give a good Government. If naybody plays mischied in the name of the chief Minister, that will reflect on the chief Minister. ಮಂಡ್ಯದಲ್ಲಿ ನಡೆದ ಗಲಾಟೆದೆ ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ಕಾರಣರು ಎಂದು ನಾನು ಹೇಳುವುದಿಲ್ಲ. ಅಲ್ಲಿ ಯಾವುದೇ ಗಲಾಟೆ ಆದರೂ ಅದಕ್ಕೆ ಮುಖ್ಯಮಂತ್ರಿಗಳು ಕಾರಣರೆಂದು ಹೇಳುವುದಕ್ಕೆ ನಾನು ತಯಾರಿಲ್ಲ. ಕೆಲವು ಸಲ, ಅಲ್ಲಿ ಯಾವ ವ್ಯಕ್ತಿಗಳಿಗೆ ನೀವು ಪುರಸ್ಕಾರವನ್ನು ಕೊಡುತ್ತೀರಿ, ಯಾವ ವ್ಯಕ್ತಿಗಳನ್ನು ನಂಬಿ ಇಲ್ಲಿ ನೀವು ಆಡಳಿತವನ್ನು ನಡೆಸುತ್ತೀರಿ ಅವರಲ್ಲಿ ಪ್ರಾಮಾಣಿಕತೆ ಹಾಗೂ ನಿಷ್ಪುರತೆ ಇಲ್ಲದಿದ್ದರೆ ಅದು ನಿಮ್ಮ ಮೇಲೆ ರಿಫ್ಲೆಕ್ಸ್ ಆಗುತ್ತದೆ. ಅದಕ್ಕೆ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಇವತ್ತು ಅದು ಒಂದು ಸಣ್ಣ ಕಾರಣ ಇರಬಹುದು, ಎಲ್ ಒಸಿ ಕೊಡುತ್ತಾರೆ, ನನಗೆ ನಿಜವಾಗಲೂ ಎಲ್ ಒಸಿ ಏಕೆ ಕೊಡುತ್ತಾರೆ ಎನ್ನುವುದು ಗೊತ್ತಿರಲಿಲ್ಲ. ನನ್ನ 15 ವರ್ಷಗಳ ಶಾಸಕ ಅನುಭವದಲ್ಲಿ ಇದನ್ನು ನೋಡಿಯೇ ಇರಲಿಲ್ಲ. ಇವತ್ತು ನಮ್ಮ ಗಮನಕ್ಕೆ ತರುತ್ತಾರೆ, ಮಂಡ್ಯ ಸಬ್ ಡಿವಿಜನ್‌ನಲ್ಲಿ 55 ಲಕ್ಷ ರೂಪಾಯಿಗಳ ಪೆಂಡಿಂಗ್ ಇದ್ದರೆ, 4 ಲಕ್ಷ ರೂಪಾಯಿಗಳ ಎಲ್ ಒಸಿ ಮಾತ್ರ ಕೊಡುತ್ತಾರೆ. ಮಂಡ್ಯದಲ್ಲಿ ಒಂದು ಕೋಟಿ ಅರವತ್ತು ಲಕ್ಷ ರೂಪಾಯಿಗಳು ಪೆಂಡಿಂಗ್ ಇದ್ದರೆ, ಅದರಲ್ಲಿ 90 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. ಮದ್ದೂರಿನಲ್ಲಿ 90 ಲಕ್ಷ ರೂಪಾಯಿಗಳ ಪೆಂಡಿಂಗ್ ಇದ್ದರೆ, ಅದರಲ್ಲಿ 80 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. ಮಳವಳ್ಳಿಗೆ 55 ಲಕ್ಷ ರೂಪಾಯಿಗಳ ಪೆಂಡಿಂಗ್ ಇದ್ದರೆ, ಅದರಲ್ಲಿ ಕೇವಲ 4 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. ನೀವು ಕೊಟ್ಟಿದ್ದೀರಿ ಎಂದು ನಾನು ಹೇಳುವುದಿಲ್ಲ. ಅಲ್ಲಿ ಇದ್ದಂತ ಅಧಿಕಾರಿಗಳು, ಸರ್ಕಾರದಲ್ಲಿ ಇವತ್ತು ಎಲ್ಲರಿಗೂ ಸಮನಾಗಿ ಹಂಚತಕ್ಕಂಥದ್ದು ಇದೆ. ಯಾವ ಯಾವ ಕೆಲಸ ಎಲ್ಲೆಲ್ಲಿ ಆಗಿರುತ್ತದೆ, ಅಲ್ಲಿಗೆ ನೇರವಾಗಿ ಹಣವನ್ನು ಕೊಡಬೇಕು. ಇದರಿಂದ ಏನು ಕೆಟ್ಟ ಅಭಿಪ್ರಾಯ ಬರುತ್ತದೆಂದರೆ, ಮುಖ್ಯ ಮಂತ್ರಿಗಳ ಕ್ಷೇತ್ರಕ್ಕ 90 ಲಕ್ಷ ರೂಪಾಯಿಗಳು ಇದ್ದರೆ, ಅದರಲ್ಲಿ 80 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ, ಅಲ್ಲಿ ಬಾಕಿ ಇರುವುದೇ ಇಲ್ಲ. ಮಳವಳ್ಳಿಗೆ 55 ಲಕ್ಷ ರೂಪಾಯಿಗಳು ಇದ್ದಲ್ಲಿ 4 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಮಂಡ್ಯಕ್ಕೆ ಒಂದೂವರೆ ಕೋಟಿ ರೂಪಾಯಿಗಳು ಇದ್ದರೇ ಅದರಲ್ಲಿ 80 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ , ಹೀಗೆ ಇದ್ದಾಗ ಯಾವ ಕಂಟ್ರಾಕ್ಟರುಗಳು ಇಂತಹ ಕ್ಷೇತ್ರಕ್ಕೆ ಕೆಲಸ ಮಾಡುವುದಕ್ಕೆ ಬರುತ್ತಾರೆ. ಇವೆಲ್ಲ ಸಣ್ಣ ಸಣ್ಣ ಕೆಲಸಗಳಾದರೂ ಸಹ ಇದರ ಮೇಲೆ ಪರಿಣಾಮ ಬಹಳ ಬೀರುತ್ತದೆ. ಅದಕ್ಕಾಗಿ ಇವತುತ ಯಾವ ಅಧಿಕಾರಿಗಳು ನಿಸ್ಪಕ್ಷಪಾತವಾಗಿ ಕೆಲಸ ಮಾಡುತ್ತಾರೆ ಅಂತಹ ಅಧಿಕಾರಿಗಳನ್ನು ಗುರುತಿಸಿ ಎಲ್ಲ ಹಂತಗಳಲ್ಲಿ ಗುರುತಿಸುವ ಅವಸ್ಯಕತೆ ಇದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಆಡಳಿತ ತಂತ್ರಜ್ಞಾನ ಮುಂದುವರೆಯುತ್ತಿರುವಾಗ ಎಲೆಕ್ಟ್ರಾನಿಕ್ ಗೌರ್ನರ್, ನೆಟ್ ವರ್ಕಿಂಗ್ ಮತ್ತು ಸಿಗ್ನಿಫಿಕೇಶನ್ ಆಫ್ ಪ್ರೊಸೀಜರ್ ಆಡಳಿತವನ್ನು ಜನರ ಹತ್ತಿರಕ್ಕೆ ತೆಗೆದುಕೊಂಡು ಹೋಗಬೇಕೆನ್ನುವುದು ಇದೆ ಅಲ್ಲ, ಅದನ್ನು ನಾನು ನಿಜವಾಗಲೂ ಮೆಚ್ಚುತ್ತೇನೆ. ಇವತ್ತು ಅಧುನಿಕ ತಂತ್ರಜ್ಞಾನದಲ್ಲಿ ಇನ್‌ಫರ್ಮೇಶನ್ ಟೆಕ್ನಾಲಜಿ ಮೇಲೆ ನಾವೇನಾದರೂ ಹಿಂದೆ ಬಿದ್ದರೆ We cannot achieve progress. I congratulate the chief Minister because he is taking initiative in this direction. ಆದರೆ ನಾವು ಇವತ್ತು 6 ತಿಂಗಳಿನಿಂದ ನೋಡಿದಾಗ ಇನ್‌ಫರ್ಮೇಷನ್ ಟೆಕ್ನಾಲಜಿಯ ಒಳಗಡೆ ಯಾವ ಯಾವ ಇಲಾಖೆಗಳಲ್ಲಿ ಏನೇನು ಕೆಲಸಗಳು ಆಗಿದೆ ಎಂದು ಹೇಳಿದರೆ ಇದು ಕೇವಲ ಘೋಷಣೆಯಲ್ಲಿ ನಿಂತಿದೆ. ಎಲ್ಲಿ ಈ ಕೆಲಸವನ್ನು ತಕ್ಷಣ ಮಾಡಬೇಕಾಗಿದೆಯೋ ಅಲ್ಲಿ ಇನ್ನೂ ಕೆಲಸವಾಗಿಲ್ಲ. ಇವತ್ತು ತಾವು ವಿಡಿಯೋ ಕಾನ್ಫರೆನ್ಸ್ ಮಾಡಬೇಕೆಂದು ಹೇಳಿದ್ದೀರಿ. ಇವತ್ತು ಉಪನೋಂದಣಾಧಿಕಾರಿ ಕಛೇರಿಯನ್ನು

ಕಂಪ್ಯೂಟರೀಕರಣ ಮಾಡಬೇಕೆಂದು ನಾವೆಲ್ಲಾ ಮಾಡಿದ್ದೇವೆ. ಇವತ್ತು ಆ ಗಣಕೀಕರಣವನ್ನು ತಕ್ಷಣ ಮಾಡುವಂತಹ ಕಾರ್ಯರೂಪಕ್ಕೆ ತರುವ ಅವಶ್ಯಕತೆ ಇದೆ. ನಾವು ಒಂದನ್ನು ಮಾತ್ರ ಮಾಡಬೇಕಾಗಿದ್ದು, ಅದು ಆಗದೆಯೇ ಅಲ್ಲಿ ಕೆಲಸವು ನಿಂತಿದ್ದು, ಶಿವಾಜಿನಗರದಲ್ಲಿ ಆ ಕೆಲಸವು ಇವತ್ತು ಆಗಿದೆ. ಆ ದಿಕ್ಕಿನಲ್ಲಿ ಇವತ್ತು ಯಾವುದೇ ಕೆಲಸವು ಆಗುತ್ತಿಲ್ಲ, ಮಾನ್ಯ ಚಂದ್ರೇಗೌಡರು ಮುಖ್ಯವಾಗಿ ತಾವು ಹೇಳಬೇಕು ಈ ಇನ್‌ಫರ್ಮೇಷನ್ ಟೆಕ್ನಾಲಜಿಯ ಆಧಾರದ ಮೇಲೆ ಇ-ಮೇಲ್ ಎಂಬ ಬಿಲ್ಲನ್ನು ನಾವು ತಂದಿದ್ದೆವು. ಆನ್‌ಲೈನ್ ರಿಜಿಸ್ಟ್ರೇಷನ್ ಆಫ್ ಡಾಕ್ಯುಮೆಂಟ್ಸ್, ಇವತುತ ಯಲಹಂಕ ಸಬ್ ರಿಜಿಸ್ಟ್ರಾ ಅಫೀಸ್‌ಗೆ ಬಹಳ ಡಿಮ್ಯಾಂಡ್ ಇದೆ. ಕೆಂಗೇರಿ ಹಾಗೂ ಗಾಂಧೀನಗರಕ್ಕೂ ಕಛೇರಿಗಳು ಇವೆ. ಏಕೆಂದರೆ, ಅಲ್ಲಿ ಡಾಕ್ಯುಮೆಂಟ್ಸ್ ರಿಜಿಸ್ಟ್ರೇಷನ್ ಜಾಸ್ತಿಯಾಗುತ್ತಿದೆ. ಅದಕ್ಕಾಗಿ ಬೇರೆ ಬೇರೆ ಕಾರಣಗಳು ಇವೆ. ಅದಕ್ಕಾಗಿ ನಾವು ನಮ್ಮ ಸರ್ಕಾರವಿದ್ದಾಗ ಏನು ಬಿಲ್ಲನ್ನು ತಂದಿದ್ದೇವೆಂದರೆ ಇವತ್ತು ಬಾಂಬೆಯಿಂದ ಡೆಲ್ಲಿಗೆ ಹೋಗಬೇಕಾದರೆ ಬೆಂಗಳೂರಿನಲ್ಲಿ ರಿಜಿಸ್ಟ್ರೇಷನ್ ಮಾಡಿಸಬೇಕಾಗುತ್ತದೆ. ಕಂಪ್ಯೂಟರ್‌ನಲ್ಲಿ ಸೀಟಿಗೆ ಎಷ್ಟು ರೇಟ್ ಎಂದು ಗೊತ್ತಾಗುತ್ತದೆ. ಯಲಹಂಕ ಸಬ್ ರಿಜಿಸ್ಟ್ರರ್ ಕಛೇರಿಯಲ್ಲಿ ರಿಜಿಸ್ಟ್ರೇಷನ್ ಮಾಡಿಸಿರುವುದನ್ನು ನಾವು ಕಂಪ್ಯೂಟರ್ ಮೂಲಕ ಗಾಂಧಿನಗರದಲ್ಲಿರತಕ್ಕಂತಹ ಸಬ್ ರಿಜಿಸ್ಟ್ರರ್ ಕಛೇರಿಯಲ್ಲಿ ಫ್ಲಾಪಿನಿಂದ ಸುಲಭವಾಗಿ ನೋಡಬಹುದು. ಇವತ್ತಿನದಿವಸ ಎಲ್ಲಿ ಬೇಕಾದರೂ ರಿಜಿಸ್ಟ್ರೇಷನ್ ಮಾಡಿಸುವಂತಹ ವ್ಯವಸ್ಥೆ ಮಾಡುವುದರಿಂದ ಸಬ್ ರಿಜಿಸ್ಟ್ರರ್ ಅಫೀಸಿನಲ್ಲಿ ರಿಜಿಸ್ಟ್ರೇಷನ್ ಮಾಡಿಸುವುದಕ್ಕೆ ಜನಸಂದಣಿ ಇರುವುದಿಲ್ಲ. ಈ ವ್ಯವಸ್ಥೆಯನ್ನು ಮಾಡದೆ ಹಲೆಯ ವ್ಯವಸ್ಥೆಯನ್ನೇ ತಾವು ಇಟ್ಟುಕೊಂಡಿದ್ದೀರಿ. ಇವತ್ತು ಡೆಪ್ಯುಟೇಷನ್ನಿನ ಮೇಲೆ ಒಬ್ಬರ ಮೇಲೆ ಇನ್ನೊಬ್ಬರು ಸಬ್ ರಿಜಿಸ್ಟ್ರರ್ ಆಗತಕ್ಕಂತಹ ಪರಿಸ್ಥಿತಿ ಬಂದಿದೆ. ಸರ್ಕಾರ ಈ ದಿಕ್ಕಿನಲ್ಲಿ ಚಿಂತನೆ ಮಾಡಿದ್ದರೆ ಇವತ್ತು 5-6 ತಿಂಗಳಲ್ಲಿ ಎಷ್ಟೋ ನೆಟ್‌ವರ್ಕಿಂಗ್ ವ್ಯವಸ್ಥೆ ಮಾಡಬಹುದಾಗಿತ್ತು. ಇದಕ್ಕೆ ಸಂಬಂಧಪಟ್ಟ ಬಿಲ್‌ನ್ನು ಇದುವರೆಗೂ ಸದನದಲ್ಲಿ ಮಂಡಿಸಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಅವರ ಆದ್ಯತೆ ಬೇರೆ ಇರಬಹುದು, ಅದ್ದರಿಂದ ನಾವು ಏನು ಮಾಡುವುದಕ್ಕಾಗುವುದಿಲ್ಲ. ತಾವು ಮುತ್ಸದ್ದಿ ರಾಜಕಾರಣಿಯಾಗಿರುವುದರಿಂದ ತಾವು ಎಲ್ಲಾ ಮಂತ್ರಿಗಳಿಗೂ ಸೂಚನೆಯನ್ನು ಕೊಡಬೇಕು. ಏನೆಂದರೆ ಇವತ್ತಿನದಿವಸ ಮಂತ್ರಿಗಳ ಕಛೇರಿಗೆ ಎಷ್ಟು ಕಡತಗಳು ಬರುತ್ತದೆ, what is the nature of those files? Whether those files deal with individual cases or whether those filed deal with polciy matters? ಇದನ್ನು ಮಾಡಿದರೆ ನಿಮ್ಮ ಮಂತ್ರಿಗಳ ಯೋಗ್ಯತೆಗೆ ಗೊತ್ತಾಗುತ್ತದೆ. ಅವರ ಪ್ರಿಯಾರಿಟೀಸ್ ಏನು? ಅವರು ಎಂತಹ ಕೇಸುಗಳ ಬಗ್ಗೆ ಎಷ್ಟು ದಿವಸ ಆ ಕಡತಗಳನ್ನು ಅವರ ಯೋಗ್ಯತೆಗಳು ನಿಮಗೆ ಗೊತ್ತಾಗುತ್ತದೆ. ಇವತ್ತು ಸರ್ಕಾರದಲ್ಲಿ ಮಂತ್ರಿಗಳಾಗಿರತಕ್ಕಂಥವರು ತಮಗೆ ಬೇಕಾಗಿರುವಂತಹ ಕೆಲಸಗಳನ್ನು ತರಿಸಿಕೊಂಡು ಮಾಡುವುದಿಲ್ಲ. ಸಾರ್ವಜನಿಕರಿಗೆ ಏನು ಬೇಕಾಗಿದೆ ಅದನ್ನು ನಾವು ಬೇಗಬೇಗನೆ ಪ್ರೋಸೆಸ್ ಮಾಡಿಸಿ ಯಾವ ಯಾವ ಹಂತಗಳಲ್ಲಿ ಏನೇನು ಆಗಬೇಕೆಂದು ಮಾಡಬೇಕಾಗಿದೆ. ಇವತ್ತು ಅದು ಆಗುತ್ತಿದೆಯೇ, ಅದು ಆಗುತ್ತಿಲ್ಲ. ತಾವು ಇನ್ನೊಂದು ತೀರ್ಮಾನವನ್ನು ತೆಗೆದು ಕೊಂಡಿದ್ದೀರಿ, ಹಂತಗಳನ್ನು ಕಡಿಮೆ ಮಾಡಿ ಇವತ್ತು ಬ್ರಿಟೀಷರ ಕಾಲದಲ್ಲಿ ಏನು ಆಡಳಿತ ವ್ಯವಸ್ಥೆ ಇತ್ತು, ಆದೇ ಆಡಳಿತ ವ್ಯವಸ್ಥೆಯನ್ನು ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಡಿವಿಜನಲ್, ಇಸ್ಟ್ರಿಕ್ಟ್, ಸಬ್‌ಡಿವಿಜಿನಲ್, ತಾಲ್ಲೂಕು, ಹೋಬಳಿ, ಗ್ರಾಮಪಂಚಾಯಿತಿ ಈ ರೀತಿಯಾಗಿ 7-8 ಲೆವೆಲ್ಸ್ ಆಫ್ ಅಡ್ಮಿನಿಸ್ಟ್ರೇಷನ್‌ನ್ನು ಮಾಡಿದ್ದೇವೆ. ಆಗ ವಾಹನಗಳು ಇರಲಿಲ್ಲ, ಟೆಲಿಸಂಪರ್ಕ ವಿರಲಿಲ್ಲ, ಕುದುರೆಯ ಮೇಲೆ ಹೋಗುವಂತಹ ಸಾಧ್ಯತೆ ಇತ್ತು. ಇವತ್ತು ಯಾವುದೇ ಒಂದು ಹಳ್ಳಿಯಿಂದ ಇಲ್ಲಿಗೆ ಒಂದು

ಇನ್‌ಫರ್ಮೇಷನ್‌ನ್ನು ಈ-ಮೇಲ್‌ನ ಮೂಲಕ ತರಿಸಿಕೊಳ್ಳತಕ್ಕಂತಹ ಅವಕಾಶವಿದೆ. ಬೆಳಗಾಂನಲ್ಲಿದ್ದಂತಹ ಅಧಿಕಾರಿಗಳನ್ನು ಇವತ್ತು ಇಲ್ಲಿಗೆ ಮೀಟಿಂಗ್‌ಗೋಸ್ಕರ ಕರೆಸಿ ಮಾತನಾಡತಕ್ಕಂಥ ಅವಶ್ಯಕತೆಯಿಲ್ಲ. ಇವತ್ತು ವಿಡೋಯೋಕಾನ್ಫರೆನ್ಸ್ ಮಾಡಿ ಮೀಟಿಂಗ್ ಮಾಡಬಹುದು ಎಂದು ತಾವೇ ಹೇಳಿದ್ದೀರಿ. ಇವತ್ತು ಜಿಲ್ಲಾಧಿಕಾರಿಗಳ ಕಾನ್ಫರೆನ್ಸ್‌ನ್ನು ಇವತ್ತು ತಾವು ವಿಡಿಯೋ ಕಾನ್ಫರೆನ್ಸ್ ಮಾಡುವುದರಿಂದ ಇವರ ನಾನ್‌ಪ್ಲಾನ್ ಎಕ್ಸ್‌ವೆಂಡಿಚರ್ ಆದಕಾರುಗಳು , ಟಿ.ಎ.ಡಿ.ಎ., ಎಲ್ಲವನ್ನು ತಗ್ಗಿಸಬಹುದು. ಆ ಸೆಟ್‌ವರ್ಕಿಂಗ್ ಬಗ್ಗೆ ಮತ್ತು ಆ ವಿಡಿಯೋ ಕಾನ್ಫರೆನ್ಸ್‌ನ ಬಗ್ಗೆ ಬರೀ ಹೇಳಿಕೆಗಳೇ ಬರುತ್ತಿದೆಯೇ ಹೊರತು ಇದು ಇನ್ನೂ ಬಂದಿಲ್ಲ. ಸ್ಟೇಟ್‌ಮೆಂಟ್ ಬಂದ ತಕ್ಷಣ ನನಗೆ ಬಹಳ ಸಂತೋಷವಾಯಿತು. ತಾವು ಏನೇನು ಮಾಡಬೇಕೆಂದು ಹೊರಟ್ಟಿದ್ದೀರಿ, ಅದನ್ನೆಲ್ಲವನ್ನು ಪ್ರಾರಂಭ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಹುದು ಎಂಬ ಆಸೆ ಇತ್ತು. ಆದರೆ ನಾವು ಯಾವ ಇಲಾಖೆಗಳನ್ನು ಮಾಡಬಹುದಾಗಿತ್ತೋ ಅಲ್ಲಿ ಇನ್ನು ಏನು ಮಾಡುವುದಕ್ಕೆ ಆಗಲಿಲ್ಲ. ಆರ್‌ಟಿಒ ಆಫೀಸ್‌ಗಳಲ್ಲಿ ಇವತ್ತು ಟ್ಯಾಕ್ಸ್‌ನ್ನು ಕಟ್ಟುವಂತದ್ದು ಇರಬಹುದು, ಲೈಸೆನ್ಸ್, ವರ್ಗಾವಣೆ ಮಾಡತಕ್ಕಂಥದ್ದು ಇರಬಹುದು ಇವತ್ತು ಕಂಪ್ಯೂಟರೈಜೇಷನ್ ಆದರೆ 5 ನಿಮಿಷದಲ್ಲೇ ಅವನದು ಟ್ಯಾಕ್ಸ್ ಕಟ್ಟುವಂತದ್ದು, ವರ್ಗಾವಣೆ ಮಾಡತಕ್ಕಂಥ ಕೆಲಸಗಳು ಬೇಗ ಆಗಬಹುದು. ಇವತ್ತು ಅದನ್ನು ಏಕೆ ಮಾಡುವುದಕ್ಕೆ ಆಗಲಿಲ್ಲ. ಅಧಿಕಾರಿಗಳು ಅದನ್ನು ಮಾಡುವುದಕ್ಕೆ ಬಿಟ್ಟುಕೊಡುತ್ತಿಲ್ಲ. ನಮ್ಮ ಸರ್ಕಾರದಲ್ಲಿ ಕ್ಯಾಬಿನೆಟ್ ಸಬ್‌ಕಮಿಟಿಯನ್ನು ಮಾಡಿ ನಾವು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದೆವು. ಕೆಲವು ಹಂತಗಳನ್ನು ತಡೆಯಬೇಕು. ಇವತ್ತು ಸರ್ಕಾರದ ಕೆಲಸದಲ್ಲಿ ಡ್ಯೂಪ್ಲಿಕೇಷನ್ ಆಗಿದೆ. ಒಂದು ಕೆಲಸವನ್ನು ಇಬ್ಬರು ಮತ್ತು ಮೂವರು ನೋಡುವಂತಹ ಪದ್ಧತಿ ಇದೆ. ನಾನು ಮೊದಲೇ ಹೇಳಿದ ಹಾಗೆ ವ್ಯವಸ್ಥೆಯನ್ನು ಯಾವ ರೀತಿ ಬದಲಾವಣೆ ಮಾಡಿದ್ದೇವೆಂದು ಹೇಳಿದರೆ ಅದಿಕಾರಿಗಳಿಗೋಸ್ಕರ ಒಂದೊಂದು ಪೋಸ್ಟ್‌ಗಳನ್ನು ಒಂದೊಂದು ಊರಿನಲ್ಲಿ ಕ್ರಿಯೇಟ್ ಮಾಡಿದ್ದೇವೆ. ಇಲ್ಲಿ ಅವರ ಕೆಲಸ ಯಾವ ರೀತಿ ಇದೆಯೆಂದರೆ, ದಾಲ್ ಡೆವಲಪ್‌ಮೆಂಟ್, ಕೋಕನೆಟ್ ಡೆವಲಪ್‌ಮೆಂಟ್, ಅಥವಾ ಪ್ಲೋರಿಕಲ್ಚರ್ ಒಂದೊಂದು ಐಟಂಗೆ ಒಬ್ಬೊಬ್ಬ ಅಧಿಕಾರಿಗಳನ್ನು ಮಾಡಿದ್ದಾರೆ. ಸೀರಿಯಲ್ಸ್‌ಗೆ ಒಬ್ಬ ಅಧಿಕಾರಿ ಈ ರೀತಿಯಾಗಿ ಮಾಡಿದ್ದೀರಿ. ಇವರ ಅವಶ್ಯಕತೆ ಇದೆಯೇ? ಇವತ್ತು ನಾನ್‌ಪ್ಲಾನ್ ಎಕ್ಸವೆಂಡಿಚರ್‌ನ್ನು ಕಡಿಮೆ ಮಾಡಬೇಕಾದರೆ ಈ ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಯಾವ ಕೆಲಸವನ್ನು ನೀವು ಮಾಡಿದ್ದೀರಿ? ಅದನ್ನು ಇನ್ನು ಅನುಷ್ಠಾನಕ್ಕೆ ತಂದಿಲ್ಲ. ಡಿವಿಜನಲ್ ಲೆವೆಲ್ ಆಫೀಸ್‌ಗಳನ್ನು ರದ್ದು ಮಾಡಬೇಕು, ಇವತ್ತು ಥ್ರೀ ಟೈರ್ಸ್ ಅಡ್ಮಿನಿಸ್ಟ್ರೇಷನ್ ಮಾತ್ರ ಇರಬೇಕು. ಒಂದು ತಾಲ್ಲೂಕು, ಇನ್ನೊಂದು ಡಿಸ್ಟ್ರಿಕ್ಟ್ ಮತ್ತೊಂದು ಸ್ಟೇಟ್ ಎಂದು ಇರಬೇಕು. ಇವತ್ತು ಹಿಂದೆ ಇದ್ದಂತಹ ಪದ್ಧತಿಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಅದನ್ನು ನಾವು ಒಳ್ಳೆಯ ರೀತಿಯಿಂದ ಮಾಡಬೇಕೆಂದು ಹೊರಟರೆ ಅದನ್ನು ಮಾಡುವುದಕ್ಕಾಗಲಿಲ್ಲವೆ ಕೊನೆಯ ಹಂತಕ್ಕೆ ನಾವು ಬಂದೆವು. ಕೆಲವು ಪತ್ರಿಕೆಗಳವರು ಮಾನ್ಯ ಕಂದಾಯ ಸಚಿವರನ್ನು ಮಾನ್ಯ ಸೋಮಶೇಖರ್‌ರವರು ಈ ಒಂದು ವ್ಯವಸ್ಥೆಯನ್ನು ತರಬೇಕೆಂದು ಪ್ರಯತ್ನವನ್ನು ಮಾಡಿದರು ನೀವು ಆ ವ್ಯವಸ್ಥೆಯನ್ನು ತರುತ್ತೀರಾ ಎಂದು ಕೇಳಿದರು. ಅದಕ್ಕೆ ಅವರು ಸೋಮಶೇಖರ್‌ರವರು ಹೇಳಿದ್ದೆಲ್ಲವನ್ನು ಮಾಡಬೇಕೇ? ನಮ್ಮ ಜಮೀನನ್ನು ಸರ್ವೆಮಾಡಿಸಿಕೊಡಿ ಎಂದು ನಾನು ಕೇಳಿದರೆ ತಾವು ಅದನ್ನು ಮಾಡಿಸಿಕೊಡಬೇಡಿ. ನಮ್ಮ ಹೊಸಹಳ್ಳಿ ಊರಿನಲ್ಲಿ ಸೋಮಶೇಖರ್‌ರವರ ಜಮೀನನ್ನು ಸರ್ವೆ ಮಾಡಿಸಿಕೊಡಿ ಎಂದು ಕೇಳಿದರೆ ಬೇಕಾದರೆ ಅದನ್ನು ತಾವು ತಡೆಮಾಡಬಹುದು. ಪತ್ರಿಕೆಯಲ್ಲಿ ಬಂದಿರುವುದನ್ನು ತೋರಿಸುತ್ತೇನೆ.

ಶ್ರೀ ಹೆಚ್.ಸಿ ಶ್ರೀ ಕಂಠಯ್ಯ (ಕಂದಾಯ ಸಚಿವರು) : ಅದು ಯಾವ ಪತ್ರಿಕೆಯಲ್ಲಿ ಬಂದಿದೆ, ತಾವು ಅದನ್ನು ತೋರಿಸಬೇಕು.

ಶ್ರೀ ಬಿ.ಸೋಮಶೇಖರ್ : ಅದು ಕನ್ನಡಪ್ರಭಾ ಪತ್ರಿಕೆಯಲ್ಲಿ ಬಂದಿದೆ. ಇದನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಹಿಂದಿನ ಸರ್ಕಾರವೆಂದು ಹೇಳಿದ್ದೀರಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ನಾನು ಯಾವತ್ತು ಆ ತರಹ ಹೇಳಲಿಲ್ಲ. ಹಿಂದಿನ ಸರ್ಕಾರವೆಂದು ನಾನು ಹೇಳಿರಬಹುದು. ಹಿಂದಿನ ಸರ್ಕಾರವೇ ಸೋಮಶೇಖರ್ ರವರು ಹೇಳಿದ್ದನ್ನು ಮಾಡಲಿಲ್ಲ ಎಂದು ನಾನು ಹೇಳಿದ್ದೇನೆ; ಇನ್ಯಾವುದನ್ನು ನಾನು ಹೇಳಲಿಲ್ಲ. ಅಸಿಸ್ಟೆಂಟ್ ಕಮೀಷನರ್ ರವರನ್ನು ಪೋಸ್ಟ್ ಮಾಡಿ ಎಂದು ಕೇಳಿದರು, ಹಿಂದಿನ ಸರ್ಕಾರದಲ್ಲಿ ಸೋಮಶೇಖರ್ ರವರೇ ಮಾಡಲಿಲ್ಲ, ನಾನೇನು ಮಾಡಲಿ ಎಂದು ಹೇಳಿದೆ.

ಶ್ರೀ ಬಿ.ಸೋಮಶೇಖರ್ : ಇದರ ಬಗ್ಗೆ ನನಗೆ ಕೋಪವೇನು ಇಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ನನಗೂ ಸಹ ಇದರ ಬಗ್ಗೆ ಕೋಪವೇನು ಇಲ್ಲ.

ಶ್ರೀ ಬಿ.ಸೋಮಶೇಖರ್ : ನಾನು ಏನು ಹೇಳುತ್ತಿದ್ದೇನೆಂದರೆ, ಒಂದು ಒಳ್ಳೆಯ ವ್ಯವಸ್ಥೆಯನ್ನು ಬದಲಾವಣೆಯನ್ನು ತರಬೇಕೆಂದು ಯಾರೇ ಪ್ರಯತ್ನ ಮಾಡಿದರೂ ಇದನ್ನು ನಾವು ಮಾಡುವುದಕ್ಕೆ ಆಗದೆ ಇರಬಹುದು, ಅದನ್ನು ನಾನು ಮಾಡಲಿಲ್ಲವೆಂದು ನಿಮ್ಮ ಸರ್ಕಾರ ಮಾಡಬಾರದು ಎಂದು ಏನೂ ಇಲ್ಲ. Merely because I initiated the scheme it does not mean that you should not do it, if it is beneficial to the public. ಆ ದೃಷ್ಟಿಯಿಂದ ನೀವು ಅದನ್ನು ಇವತ್ತು ಏನು ಕ್ಯಾಬಿನೆಟ್ ತೀರ್ಮಾನ ಮಾಡಿದ್ದೀವೆ, ಮಧ್ಯ ಹಂತದ ಆಡಳಿತ ವರ್ಗವನ್ನು ಇವತ್ತು ರದ್ದುಮಾಡಬೇಕು, ಇವತ್ತು ಡೆಲವರಿ ಕಾಸ್ಟ್ ಕಡಿಮೆಯಾಗುತ್ತದೆ. ಇವತ್ತು ಅಡ್ಮಿನಿಸ್ಟ್ರೇಷನ್ ಸ್ಟ್ರೀಮ್ ಲೈನ್ ಆಗುತ್ತದೆ, ಡ್ಯೂಪ್ಲಿಕೇಷನ್ ಆಗುತ್ತಿದೆ. ಪ್ರೊಸೀಜರ್ಸ್ ಇರಬಹುದು ಮತ್ತು ಅಧಿಕಾರವಿರಬಹುದು, ಅದನ್ನು ನಾವು ತಪ್ಪಿಸಿ ಕೇವಲ ಒಂದು ಹಂತದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆಯಾಗಬೇಕು. ಅದರಲ್ಲೂ ವಿಶೇಷವಾಗಿ ಈ ಒಂದು ಮಾಹಿತಿತಂತ್ರಜ್ಞಾನ ಇವತ್ತು ತರುತ್ತಿರುವಾಗ ಆಡಳಿತದಲ್ಲಿ ವಿಕೇಂದ್ರೀಕರಣ ಪಾರದರ್ಶಕತೆ ಇದನ್ನು ನೀವು ಮಾಡಿದಾಗ ಮಾತ್ರ ಇದರ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ತಾವು ಏನು 5 ಪರ್ಸೆಂಟನ್ನು ಕಡಿತ ಮಾಡುತ್ತಿದ್ದೀರಿ, ಇದು ಕೇವಲ ವೇಕೆನ್ಸಿಗಳನ್ನು ಕಡಿತ ಮಾಡುವುದಿಲ್ಲ, ನೀವು ದೊಡ್ಡ ಹಂತದಲ್ಲಿ ಇದನ್ನು ಕಡಿತ ಮಾಡಬೇಕು. ಕ್ಲಾಸ್-1, ಎ ಗ್ರೂಪ್ ಅಫೀಸರ್ಸ್ ಯಾರಿದ್ದಾರೆ ಅವರಲ್ಲಿ ಕಡಿತ ಮಾಡಬೇಕು. ತಾವು ಆ ತೀರ್ಮಾನವನ್ನು ತೆಗೆದುಕೊಳ್ಳಬೇಕು. ನಾನು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಏನು ಹೇಳುತ್ತೇನೆಂದರೆ ಇವತ್ತು ತಾವು ನಿಜವಾಗಲೂ ಸೀರಿಯಸ್ಸಾಗಿದ್ದರೆ Why don't you think of abolishing the Upper House itself. ಇದರ ಬಗ್ಗೆ ಬಹಳ ಜನಕ್ಕೆ ನೋವಾಗಬಹುದು. ನಾನು ಹೇಳತಕ್ಕದ್ದೇನೆಂದರೆ, ಎಷ್ಟೋ ರಾಜ್ಯಗಳಲ್ಲಿ ಇವತ್ತು ತಾವು ಎಷ್ಟು ಡಿಫಿಸಿಟ್ ಬಜೆಟನ್ನು ಹಾಕಿದ್ದೀರಿ? ಸುಮಾರು 360-370 ಡಿಫಿಸಿಟ್ ಬಜೆಟ್‌ನ್ನು ಹಾಕಿದ್ದೀರಿ. ಬೇರೆ ಬೇರೆ ರಾಜ್ಯಗಳಲ್ಲಿ ಡಿಫಿಸಿಟ್ ಬಜೆಟ್‌ಗಳಿರತಕ್ಕಂಥವರು ಇದರಿಂದ ಬಹಳ ವೈಟ್ ಎಲಿಫೆಂಟ್ ಆಗಿದೆ ಎಂದು ಹೇಳಿ ರದ್ದು ಮಾಡಿದ್ದಾರೆ. ಯಾವ ಉದ್ದೇಶದಿಂದ ಅದನ್ನು ರಚನೆ ಮಾಡಿತ್ತು, ಆ ಉದ್ದೇಶ ಇವತ್ತು ಸಫಲವಾಗುತ್ತಿದೆಯೇ? ನಾನು ಟೀಕೆಯನ್ನು ಮಾಡುತ್ತಿಲ್ಲ, ನಾವು ಆಬ್ಜಕ್ಟೀವ್ ಆಗಿ ಯೋಚನೆ ಮಾಡಬೇಕು, ತಾವು ಮಂತ್ರಿಗಳು,

ಮಂತ್ರಿಗಳಾಗಿದ್ದವರು ನಾವು ಇಲ್ಲೇ ಇದ್ದೇವೆ ಆದ್ದರಿಂದ ಇವತ್ತು ಎಷ್ಟು ಹಣ ಖರ್ಚಾಗುತ್ತಿದೆ. ಅದನ್ನು ನೀವು ಯೋಚನೆ ಮಾಡುವುದಾದರೆ ಇವತ್ತು ನೂರಾರು ಕೋಟಿ ರೂಪಾಯಿಗಳನ್ನು ನೀವು ಕಡಿಮೆ ಮಾಡಬಹುದು. ಅದರ ಬಗ್ಗೆ ಒಂದು ಕಮಿಟಿಯನ್ನು ರಚನೆ ಮಾಡಿ, ಅದು ರಾಜಕೀಯ ರೀಹ್ಯಾಬ್ಲಿಟೇಷನ್ ಸೆಂಟರ್ ಆಗಬಾರದು. ಆ ದೃಷ್ಟಿಯಿಂದ ತಾವು ಯೋಚನೆಯನ್ನು ಮಾಡುವುದಾದರೆ ನಿಜವಾಗಿಯೂ ನಮ್ಮ ಹೆಸರು ಸುವರ್ಣಾಕ್ಷರದಲ್ಲಿ ಇತಿಹಾಸಕ್ಕೆ ದಾಖಲಾಗುತ್ತಿದೆ. ತಾವು ಅದರ ಬಗ್ಗೆ ಮಾಡಬೇಕು. ತಾವು ಸಚಿವರನ್ನು ಕೇವಲ ಉನ್ನತ ಹಂತದಲ್ಲಿ ಮಾಡಬೇಕು. ಒಬ್ಬ ಸೆಕ್ರೆಟರಿಯ ಜೊತೆಗೆ ಇನ್ನೊಬ್ಬ ಪರ್ಸನಲ್ ಚೀಫ್ ಸೆಕ್ರೆಟರಿಯನ್ನು ಮಾಡುವುದರಿಂದ ಎಕ್ಸ್‌ಪೆಂಡಿಚರ್‌ಗಳನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ. ಅದನ್ನು ತಪ್ಪು ಸೀರಿಯಸ್ಸಾಗಿ ಯೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವತ್ತು ವರ್ಗಾವರ್ಗಿ ಕಾಲ ಬಂದಿದೆ, ಇದರ ಬಗ್ಗೆ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಶ್ರೀ ಜೆ.ಹೆಚ್. ಪಟೇಲ್‌ರವರು 2-3 ವರ್ಷಗಳ ಕಾಲ ವರ್ಗಾವರ್ಗಿ ಇಲ್ಲವೆಂದು ಒಳ್ಳೆಯ ಗಟ್ಟಿಯಾದ ನಿಲುವನ್ನು ತೆಗೆದುಕೊಂಡಿದ್ದರು. ಆದ್ದರಿಂದ ನಾವು 2-3 ವರ್ಷಗಳ ಕಾಲ ನೆಮ್ಮದಿಯಿಂದ ಆಡಳಿತವನ್ನು ಮಾಡುವುದಕ್ಕೆ ಅವಕಾಶವಾಯಿತು. ಇವತ್ತು ಒಂದು ಸ್ಟೇಟ್‌ಮೆಂಟ್ ಬಂದಿದೆ, ನನಗೆ ಬಹಳ ಸಂತೋಷವಾಯಿತು, ಮಿನಿಮಮ್ ವರ್ಗಾವಣೆಯನ್ನು ತಾವು ಮಾಡುತ್ತೇವೆಂದು ಹೇಳಿದ್ದೀರಿ.

5.50 ಪಿ.ಎಂ

ನೀಡ್ ಬೇಸ್ ಮೇಲೆ ಮಾಡುವಾದ ಆದಕ್ಕೆ ಆಬ್ಜೆಕ್ಟೀವ್ ಆಗಿ ಒಂದು ಗೈಡ್‌ಲೈನ್ಸ್ ಹಾಕಿ. ನಮ್ಮ ಸರ್ಕಾರ ಇದ್ದಾಗ ಮುಖ್ಯಮಂತ್ರಿಗಳು ಯಾರಾದರೂ ಎಂ.ಎಲ್.ಎ.ಗಳು ಲೆಟರ್ ತೆಗೆದುಂಡು ಹೋದರೆ ಕೈಗೆ ಪಡೆದುಕೊಂಡು ಒಂದು ಶಬ್ದ ಬರೆದವರಲ್ಲ. ಅದನ್ನು ನಾನು ಓದುವುದಕ್ಕಾಗುವುದಿಲ್ಲ, ವರ್ಗಾವರ್ಗಿ ಆದರೆ ಒಂದು ಶಬ್ದ ಒಂದು ಅಕ್ಷರ ಅದರ ಮೇಲೆ ಬರೆಯುತ್ತಿರಲಿಲ್ಲ. ನೀವು ಹಾಗೆಯೇ ಮಾಡಿ. ಅಂತಹ ವಿಚಾರಗಳಲ್ಲಿ ನಿಷ್ಪಕ್ಷಪಾತವಾಗಿ ಕೆಲವು ಹಾರ್ಡ್ ಡಿಸಿಷನ್ ತೆಗೆದುಕೊಂಡರೆ ಒಳ್ಳೆಯದು. ನಾನು ಈ ಸಂದರ್ಭದಲ್ಲಿ ಮಾನ್ಯ ಗುಂಡೂರಾಯರನ್ನು ಒಪ್ಪ ಬೇಕಾಗಿದೆ. ಎಂ.ಎಲ್.ಎಗಳು ಎರಡು ವರ್ಷಗಳ ಕಾಲ ಅವರನ್ನು ನೋಡಲಿಕ್ಕೆ ಆಗಲಿಲ್ಲ. ಇವತ್ತು ಆ ಶಕ್ತಿ ನಿಮಗೆ ಬಂದಿದೆ. ರಾಜಕೀಯವಾಗಿ ಶಕ್ತಿಯುತರಾಗಿದ್ದೀರಿ. ಶ್ರೀಮತಿ ಸೋನಿಯಾ ಗಾಂಧಿಯವರು ಬೇರೆ ನಿಮಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಹಿರಿಯರಾಗಿದ್ದೀರಿ, ನಿಮ್ಮ ಮೇಲೆ ಎಲ್ಲರಿಗೂ ಗೌರವವಿದೆ. ಇಂತಹ ತೀರ್ಮಾನಗಳನ್ನು ಏಕೆ ಮಾಡಬಾರದು? ಒಂದು ಆಬ್ಜೆಕ್ಟೀವ್ ಆಗಿ ಒಂದು ನಾರ್ಮ್ಸ್ ಇಟ್ಟುಕೊಂಡು ಮಾಡಿದರೆ ಆಗ ವಿರೋಧ ಪಕ್ಷದವರಾಗಲೀ ಯಾರೇ ಆಗಲಿ ನೆಮ್ಮದಿ ಒಂದು ವಿಶ್ವಾಸ ಆಡಳಿತದಲ್ಲಿ ಬರುತ್ತದೆ. ಇಲ್ಲದಿದ್ದರೆ ನೀವು ಮತ್ತೆ ಒಳ್ಳೆಯ ಆಡಳಿತವನ್ನು ಕೊಡುವುದಕ್ಕಾಗುವುದಿಲ್ಲ. ಈಗಾಗಲೇ ಎರಡು ಮೂರು ವಿಚಾರಗಳಲ್ಲಿ ನನಗಂತೂ ನೆಮ್ಮದಿಯಾಗಿದೆ. ನಾವು ಕಟ್ಟು ನಿಟ್ಟಿನ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆಂದು ನಿರೀಕ್ಷೆ ಮಾಡಿದ್ದೆವು ಆ ದೃಷ್ಟಿಯಲ್ಲಿ ಆಗಿಲ್ಲ. ಏಕೆಂದರೆ ನೀವು ಅಧಿಕಾರಕ್ಕೆ ಬಂದು ಆರು ತಿಂಗಳಾಗಿದೆ ಬಹಳ ಕಾಲ ಸಿಕ್ಕಿಲ್ಲ. ಇನ್ನು ಮುಂದೆ ಬಹಳಷ್ಟು ಅವಕಾಶವಿದೆ. ಆ ಕೆಲಸವನ್ನು ತಾವು ಮಾಡಬೇಕೆಂದು ಹೇಳಿ ಮತ್ತೊಮ್ಮೆ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ.ಕೆ ರಾಮಯ್ಯ (ಹುಲಿಯೂರು ದುರ್ಗ) :ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನೆಯನ್ನು ಅರ್ಪಿಸುವ ನಿರ್ಣಯಕ್ಕೆ ಬೆಂಬಲ ಕೊಡುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಈ ವಂದನಾನಿರ್ಣಯದ ಮೇಲೆ ಭಾಷಣ ಮಾಡಿದಂತಹ ನನ್ನ ಸ್ನೇಹಿತರ ಭಾಷಣವನ್ನು ಕೇಳಿದ್ದೇನೆ. ಮತ್ತೆ ಐದು ವರ್ಷಗಳಿಂದ ನಾನು ಈ ಸದನದಲ್ಲಿ ಇಲ್ಲದೇ ಇದ್ದುದರಿಂದ ಐದು ವರ್ಷಗಳ ಕಾಲ ಮಾನ್ಯ ರಾಜ್ಯಪಾಲರು ಮಾಡಿರುವ ಎಲ್ಲ ಭಾಷಣಗಳ ಪ್ರತಿಯನ್ನು ತರಿಸಿ ಒಂದು ವಾರದಿಂದ ಓದಿದ್ದೇನೆ.ನಾಲ್ಕೈದು ವಿಧಾನಸಭೆ ಅಧಿವೇಶನಗಳಲ್ಲಿದ್ದರೂ ಕೂಡ, ಕಳೆದ ವಿಧಾನಸಭೆ ಅಧಿವೇಶನದಲ್ಲಿ ನಾನು ಇರಲಿಲ್ಲ. ಆ ಐದು ವರ್ಷಗಳಲ್ಲಿ ರಾಜ್ಯಪಾಲರು ಏನೇನು ಭಾಷಣ ಮಾಡಿದ್ದಾರೆಂದು ನನಗೆ ಗೊತ್ತಿರಲಿಲ್ಲ. ಅದಕ್ಕಾಗಿ ಈ ವರ್ಷದ ರಾಜ್ಯಪಾಲರ ಭಾಷಣದ ಜೊತೆಗೆ ಕಳೆದ ಐದು ವರ್ಷಗಳ ರಾಜ್ಯಪಾಲರುಗಳ ಭಾಷಣಗಳನ್ನು ಓದಿದ್ದೇನೆ. ಈ ಹಿನ್ನೆಲೆಯಲ್ಲಿ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ರಾಜ್ಯಪಾಲರ ಭಾಷಮ ಅಂದರೇನು ಎನ್ನುವುದರ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಸರ್ಕಾರ ಆ ವರ್ಷ ಹಾಕಿ ಕೊಳ್ಳುವಂತಹ ಕಾರ್ಯಕ್ರಮದ ಒಂದು ದಿಕ್ಸೂಚಿ. ತಾನು ತಳೆಯಬೇಕಾದ ತಳೆದಿರುವ ಧೋರಣೆಗಳನ್ನು ಸೂಚಿಸುವಂತಹ ಒಂದು ಸೂಚನೆ ಅಷ್ಟೆ. ಅದು ಪಟ್ಟಿಯಲ್ಲ ವಿವರ ಅಲ್ಲ, ಅದು ಆಯವ್ಯಯವೂ ಅಲ್ಲ. ಈ ಧೋರಣೆಯನ್ನು ಪ್ರಕಟಿಸುವಂತಹ ರಾಜ್ಯಪಾಲರ ಭಾಷಣದಲ್ಲಿ ಏನಿರಬೇಕು ಏನಿರಬಾರದು ಎಂದು ಯಾವ ನಿಯಮವೂ ಇಲ್ಲ. ಸಂವಿಧಾನವನ್ನು ಕೂಲಂಕುಷವಾಗಿ ತಿರುವಿ ಹಾಕಿದರೆ ರಾಜ್ಯಪಾಲರ ಭಾಷಣ what should it contain and what it should not contain. ಎಂದು ಎಲ್ಲೂ ನನ್ನ ಗಮನಕ್ಕೆ ಬರಲಿಲ್ಲ. ಆದ್ದರಿಂದ ರಾಜ್ಯಪಾಲರ ಭಾಷಣ, ಒಂದು ಸಾರಿ ನಾನು ಹೇಳಿದ್ದೆ. 10- 15 ವರ್ಷಗಳ ಹಿಂದೆ ಇದೇ ಜಾಗದಲ್ಲಿ ಈ ಕಡೆ ಕುಳಿತಿದ್ದೆನೊ ಆ ಕಡೆ ಕುಳಿತಿದ್ದೆನೊ ಮರೆತಿದ್ದೇನೆ. ಇದು ನಾವು ಹಳ್ಳಿಯ ಕಡೆ ವರ್ಷದ ತಿಥಿ ಮಾಡಿದಹಾದೆ. ಅಥವಾ ಪಟ್ಟಣದವರು ಶ್ರಾದ್ಧ ಮಾಡಿದಹಾಗೆ. ನಮಗೆ ಅದು ಏಕೆ ಮಾಡುತ್ತೇವೆನ್ನುವುದು ಗೊತ್ತಿಲ್ಲ. ಆದರೂ ಮಾಡುತ್ತೇವೆ. ಆದರಿಂದ ಮೂರು ಕಾಸಿನ ಉಪಯೋಗವಿಲ್ಲ. ಇದೇನು ಕೆಟ್ಟ ಪದವೇನೂ ಅಲ್ಲ ಇದರ ಬಗ್ಗೆ ಹಿಂದೆ ಚರ್ಚೆಯಾಗಿದೆ. ಇವತ್ತು ಕೂಡ ಆ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯಪಾಲರ ಭಾಷಣದಿಂದ ಯಾವ ಪುರುಷಾರ್ಥದ ಸಾಧನೆಯಾಗುತ್ತದೊ ನನಗಂತೂ ಗೊತ್ತಿಲ್ಲ. ಆದರೆ ಈ ರಾಜ್ಯಪಾಲರ ಭಾಷಣವನ್ನು ಕುರಿತು ಮಾತನಾಡುವಾಗ ನನ್ನ ಸ್ನೇಹಿತರು ಒಂದು ಮಾತನ್ನು ಹೇಳಿದರು. ರಾಜ್ಯಪಾಲರ ಭಾಷಣ ಬಹಳ ಸುಂದರವಾಗಿದೆ ಎಂದು ಎಸ್.ಎಸ್. ಪಾಟೀಲರು ಹೇಳಿದರು. ಯಾರ್ಯಾರು ಏನೇನು ಹೇಳಿದರು ಎಂದು ನಾನು ಬರೆದುಕೊಂಡಿದ್ದೇನೆ. ಅವರಿಗೆ ಬಹಳ ಸುಂದರವಾಗಿದೆ ರಾಜ್ಯಪಾಲರ ಭಾಷಣ. (ಎರಡು ರಾಜ್ಯಪಾಲರ ಭಾಷಣದ ಪ್ರತಿಗಳನ್ನು ಸಭೆಗೆ ತೋರಿಸುತ್ತಾ) ಇವೆರಡರಲ್ಲಿ ಯಾವುದು ಸುಂದರವಾಗಿದೆ. ಅವರದೇ ಬಹಳ ಸುಂದರವಾಗಿದೆ. ಮಾನ್ಯ ಎಸ್. ಎಸ್. ಪಾಟೀಲರೇ ನಮಗೆ ಅತ್ಯಂತ ಸುಂದರವಾದ ಮುಖ್ಯಮಂತ್ರಿಗಳಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಸುಂದರವಾದದ್ದು ನೀವು ತೋರಿಸಲಿಲ್ಲ, ಯಾವುದೋ ಒಂದು ತಂದಿದ್ದೀರಿ. ನಾನು ತೋರಿಸಿದ್ದು ನೀವು ತೋರಿಸಲೇ ಇಲ್ಲ.

ಶ್ರೀ ವೈ.ಕೆ. ರಾಮಯ್ಯ: ಬೆಳಿಗ್ಗೆ ಅಧ್ಯಕ್ಷರು ನನಗೊಂದು ಕಟ್ಟಪ್ಪಣೆ ಮಾಡಿದ್ದಾರೆ. ಅದೇನೆಂದರೆ ಕೆಲವು ವಿಷಯಗಳನ್ನು ನಾನು ಪ್ರಸ್ತಾಪ ಮಾಡಬಾರದು ಕಾಂಟ್ರವರ್ಸಿಯಾಗಿ ಎಂದು. ಅಪ್ರಸ್ತುತವಾದ ವಿಷಯಗಳ ಬಗ್ಗೆ ಅಪ್ರಸ್ತುತವಾದ ವ್ಯಕ್ತಿಗಳ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ನನಗೆ ಆಸಕ್ತಿಯಿಲ್ಲ. ಆದ್ದರಿಂದ

ಅದನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದೂ ಇಲ್ಲ, ಅಧ್ಯಕ್ಷರು ಅದರ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆಯೂ ಇಲ್ಲ. ಆದರೆ ನಾನು ಮಾಡುವುದು ಒಂದು ಮಾತನ್ನು ಮಾನ್ಯ ಪಾಟೀಲರು ಹೇಳಿದ್ದರಿಂದ ಹೇಳಬೇಕಾಗಿದೆ. ಅವರು ಸುಂದರವಾಗಿದೆಯೆಂದು ಹೇಳಿದ್ದನ್ನು ಹೇಳಬೇಕಾಗಿದೆ. ನಮಗೆ ಅತ್ಯಂತ ಸುಂದರವಾದ ಮುಖ್ಯಮಂತ್ರಿಗಳು ಇರುವುದರಿಂದ ಸುಂದರವಾದ ಪುಸ್ತಕದ ಅವಶ್ಯಕತೆ ಇಲ್ಲ. ಈ ರಾಷ್ಟ್ರದ ನಾಯಕರೊಬ್ಬರು ಪ್ರಸ್ತಾಪ ಮಾಡಿದ್ದಾರೆ. ಸುಂದರವಾಗಿದ್ದರೆ ಸಾಲದು, ಜನಗಳ ಜನಪರ ಕೆಲಸ ಮಾಡುವಂತಹ ಇಚ್ಛಾಶಕ್ತಿಯ ಪ್ರದರ್ಶನವನ್ನು ಮುಖ್ಯಮಂತ್ರಿಗಳು ಮಾಡಬೇಕಾಗಿತ್ತು. ನನ್ನ ಸ್ನೇಹಿತರಿಂದ ಪಟ್ಟಿಯನ್ನು ನಾನು ಕೇಳಲಿಕ್ಕೆ ಇಷ್ಟಪಡುತ್ತೇನೆ, ಆ ಇಚ್ಛಾಶಕ್ತಿಯ ಪ್ರದರ್ಶನವನ್ನು ಮುಖ್ಯಮಂತ್ರಿಗಳು ಹೇಗೆ ಮಾಡಬೇಕು. ಅದರೊಳಗೆ ಹೇಳಿಕೆಯನ್ನು ಕೊಟ್ಟಿರತಕ್ಕ ಪಕ್ಷದ ನಾಲ್ಕು ಜನ ಸದಸ್ಯರು ಇಲ್ಲಿದ್ದಾರೆ. ಅವರು ನಾಲ್ಕಕ್ಕೆ ಇಳಿದುಬಿಟ್ಟಿದ್ದಾರೆ, ಅವರನ್ನು ನೋಡಿದರೆ ಅಯ್ಯೋ ಪಾಪ ಅನ್ನಿಸುತ್ತದೆ. ಅವರಿಗೆ ನಾನು ಕೇಳಲಿಕ್ಕೆ ಇಚ್ಛಿಪಡುತ್ತೇನೆ, ಮುಖ್ಯಮಂತ್ರಿಗಳು ಸುಂದರವಾಗಿದ್ದರೆ ಸಾಲದು, ಅವರು ಜನಪರ ಕೆಲಸ ಮಾಡುವಂತಹ ಇಚ್ಛಾಶಕ್ತಿಯ ಪ್ರದರ್ಶನವನ್ನು ಮಾಡಬೇಕು. ಅವರು ಯಾವುದಾದರೂ ಸಂದರ್ಭದಲ್ಲಿ ಮುಖ್ಯಮಂತ್ರಿಗಳೂ ಯಾವ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಬೇಕೆಂದು ಅವರಾದರೂ ಹೇಳಬಹುದು ಅಥವಾ ಅವರ ಅಣ್ಣತಮ್ಮಂದಿರು ಇದ್ದಾರೆ ಅವರ ಪಕ್ಷಕ್ಕೆ ಅಣ್ಣತಮ್ಮಂದಿರು ಅವರು ಬೇಕಾದರೂ ನಮಗೆ ತಿಳಿಸಬಹುದು. ನನ್ನ ಸ್ನೇಹಿತರೊಬ್ಬರು ಹೇಳಿದರು, ನಿಮ್ಮ ಪಕ್ಷದ ಪ್ರಣಾಳಿಕೆಗೂ ರಾಜ್ಯಪಾಲರ ಭಾಷಣಕ್ಕೂ ಒಂದಕ್ಕೊಂದು ಸಂಬಂಧವಿಲ್ಲ ಎಂದು ಸಂಬಂಧ ಇರಬೇಕಾಗಿತ್ತು ಎರಡು ಕಾರಣಕ್ಕಾಗಿ, ಮೊದಲನೆಯ ಕಾರಣ ಪಕ್ಷದ ಪ್ರಣಾಳಿಕೆ ಚುನಾವಣೆಯ ಸಮಯದಲ್ಲಿ ಓಟು ಕೇಳಲಿಕ್ಕಾಗಿ ಸಿದ್ಧನಾಡುವಂತಹ ಒಂದು ಪ್ರಕಟಣೆ. It is an appela at the time of Elections to seek votes. ಓಟು ಕೀಳುವುದಕ್ಕೆ ಪ್ರಕಟ ಮಾಡುವಂತಹ ಪ್ರಕಟಣೆಗೆ ನಾವು ಏನೇನು ಹೇಳಿರುತ್ತೇವೆಯೋ ಅದನ್ನೆಲ್ಲಾ ಕಾರ್ಯ ರೂಪಕ್ಕೆ ತಂದಂತಹ ಸರ್ಕಾರ ಇವತ್ತಿನವರೆಗೆ ಯಾವುದೂ ಇಲ್ಲ, ಹಿಂದೆ ಬಂದಿಲ್ಲ ಮುಂದೆ ಬರುವುದೂ ಇಲ್ಲ. I ಹಾ ಯಾವುದಾದರೂ ಇಂತಹ ಸರ್ಕಾರ ಇಂತಹ ಪಕ್ಷದ ಸರ್ಕಾರ ತನ್ನ ಪಕ್ಷದ ಪ್ರಣಾಳಿಕೆಯಲ್ಲಿ ತಂದಿರುವಂತಹ ಎಲ್ಲಾ ಆಶ್ವಾಸನೆಗಳನ್ನು ಕಾರ್ಯರೂಪಕ್ಕೆ ತಂದಿದೆ ಅನ್ನುವಂತಹ ಒಂದೇ ಒಂದು ಪ್ರಣಾಳಿಕೆಯನ್ನು ನನ್ನ ಗಮನಕ್ಕೆ ತಂದರೆ ನನ್ನ ತಪ್ಪನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದು ಇಲ್ಲವೆಂದರೆ ನಾನು ಇವತ್ತು ಸ್ಪಷ್ಟಪಡಿಸಲಿಕ್ಕೆ ಇಷ್ಟಪಡುತ್ತೇನೆ, 50 ವರ್ಷಗಳ ನಮ್ಮ ಭಾರತದ ಆಡಳಿತದಲ್ಲಿ, ಹೊರದೇಶಗಳಲ್ಲಿ ಯಾರು ತಂದಿದ್ದಾರೋ ಗೊತ್ತಿಲ್ಲ. ನಮ್ಮ ದೇಶದಲ್ಲಿ ಯಾವ ರಾಜ್ಯಸರ್ಕಾರವೇ ಆಗಲಿ, ಯಾವ ಕೇಂದ್ರ ಸರ್ಕಾರವೇ ಆಗಲಿ, ಯಾವ ಪಕ್ಷದ್ದೇ ಆಗಲಿ ತನ್ನ ಪ್ರಣಾಳಿಕೆಯಲ್ಲಿ ಹೇಳಿದ ಎಲ್ಲಾ ಆಶ್ವಾಸನೆಗಳನ್ನು ಕಾರ್ಯ ರೂಪಕ್ಕೆ ತಂದಂತಹ ನಿದರ್ಶನ ಇಲ್ಲ, ಮುಂದೆ ಇರಲಾರದು. ಆದ್ದರಿಂದ ಪ್ರಣಾಳಿಕೆ ಯಲ್ಲಿ ಹೇಳಿದ ಎಲ್ಲವನ್ನೂ ರಾಜ್ಯಪಾಲರ ಭಾಷಣದಲ್ಲಿ ಆಗಲಿ, ಆಯವ್ಯಯದಲ್ಲಾಗಲೀ ತರಲಿಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ನನ್ನ ಸ್ನೇಹಿತರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಆಯವ್ಯಯ ಕೂಡ ಬಂದುಬಿಟ್ಟಿದೆ ಅದೊಂದು ವಿಶೇಷ.

ಶ್ರೀ ಕೆ. ಶ್ರೀನಿವಾಸ ಗೌಡ : ಹಾಗಾದರೆ ಪ್ರಣಾಳಿಕೆಯನ್ನು ಪಕ್ಷಗಳು ಏಕೆ ತರಬೇಕು? ಪ್ರಣಾಳಿಕೆ ಮೊದಲು ನಾವು ಜನಗಳಿಗೆ ಕೊಡುವಂತಹ ಆಶ್ವಾಸನೆ. ಈ ಪ್ರಣಾಳಿಕೆ ಪ್ರಕಾರ ನಾವು ಅದಕ್ಕೆ ಬದ್ಧರಾಗಿದ್ದೇವೆ, ಆ ಪ್ರಕಾರ ಸರ್ಕಾರ ನಡೆಸುತ್ತೇವೆಂದು ಹೇಳುತ್ತಾರೆ. ಹಾಗೆ ಇದ್ದರೆ ಪ್ರಣಾಳಿಕೆಯನ್ನು ಏಕೆ ತರಬೇಕು?

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುವಾಗ ನನ್ನ ಮಾತಿಗೆ ಉತ್ತರ ಕೊಡಲಿ. ನನ್ನ ಅಭಿಪ್ರಾಯವನ್ನು ನಾನು ಹೇಳುತ್ತೇನೆ. ಪ್ರಣಾಳಿಕೆ ಅಂದರೆ ಏನು ಎಂದು ನಾನು ಹೇಳಿದ್ದೇನೆ ಓಟು ಕೇಳುವುದಕ್ಕೆ ಹೋದಾಗ, ಹೆಣ್ಣು ಕೇಳುವುದಕ್ಕೆ ಹೋದಾಗ, ಯಾರೂ ಕೂಡ ನಮ್ಮ ಹುಡಗನಿಗೆ ಕಣ್ಣು ಕಾಣುವುದಿಲ್ಲ ಕಿವಿ ಕೇಳುವುದಿಲ್ಲವೆಂದು ಯಾರೂ ಹೆಣ್ಣು ಕೊಡಿಯೆಂದು ಕೇಳುವುದಿಲ್ಲ. ನಮ್ಮ ಹುಡುಗನ ಕೈ ಇಷ್ಟು ಉದ್ದ ಇದೆ, ಅವನು ಸುಂದರಾಂಗ, ಅಷ್ಟು ದಪ್ಪ ಅವನೆ, ಏನು ಮಾತನಾಡುತ್ತೀರಿ ಸ್ವಾಮಿ? it is very simple ಹೆಣ್ಣು ಕೇಳುವುದಕ್ಕೆ ಹೋದಾಗ ಯಾರೂ ಗಂಡನ ಕುರುಡು ಹೇಳುವುದಿಲ್ಲ ರೀ. ಹೆಣ್ಣಿನ ಕುರುಡು ಯಾರೂ ಮುಚ್ಚಿಕೊಳ್ಳುವುದಿಲ್ಲ. ಹಾಗೆಯೇ ಓಟು ಕೇಳುವುದಕ್ಕೆ ಹೋದಾಗ ಯಾರೂ ಏನೂ ಹೇಳುವುದಿಲ್ಲ. ಬಹಳ ಸುಂದರಾಂಗ ಎಂದು ನಾವು ಹೇಳುತ್ತೇವೆ.

ಛೇರ್ಮನ್ : ಅಪಾರ್ಥ ಮಾಡುವ ಅವಶ್ಯಕತೆಯಿಲ್ಲ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ಇನ್ನು ಬಹಳ ಜನ ಆಯವ್ಯಯದ ಬಗ್ಗೆ ಮಾತನಾಡಿರತಕ್ಕಂಥ ಭಾಷಣವನ್ನು ನಾನು ಕೇಳಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಅದು ರೆಕಾರ್ಡಿನಲ್ಲಿ ಇದೆ. ಅದು ಸರಿಯಿದೆಯೋ ಇಲ್ಲವೋ ಎಂದು ನೋಡಿ.

ಶ್ರೀ ವೈ.ಕೆ. ರಾಮಯ್ಯ : ಏನೂ ಇಲ್ಲ. ನಮ್ಮ ಹುಡುಗನಿಗೆ ತೋಳು ಇಷ್ಟು ಉದ್ದ ಇದೆ ಎಂದು ಹೇಳುತ್ತಾರೆ ಎಂದು ಹೇಳಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಅದು ರೆಕಾರ್ಡಿನಲ್ಲಿ ಸರಿಯಾಗುತ್ತದೆಯೇ ಎಂದು ನೋಡಬೇಕಾಗುತ್ತದೆ.

ಛೇರ್ಮನ್ : ಅದು ಅಬ್ಜೆಕ್ಷನ್‌ಬಲ್ ಇದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಅನ್‌ಪಾರ್ಲಿಮೆಂಟರಿ ಆಗಿದ್ದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಆವರು ತೋಳು ಎಂದು ಸೇರಿಸಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಅವರು ಹಾಗೆ ಶಬ್ಧ ಪ್ರಯೋಗ ಮಾಡಿಲ್ಲ.

ಛೇರ್ಮನ್ : ಅನ್‌ಪಾರ್ಲಿಮೆಂಟರಿ ಆಗಿದ್ದರೆ ತೆಗೆಸೋಣ ಬಿಡಿ.

ಶ್ರೀ ವೈ.ಕೆ. ರಾಮಯ್ಯ : ಆಯವ್ಯಯದ ಬಗ್ಗೆ ಮಾತನಾಡುತ್ತ ಆಯವ್ಯಯ ಸರಿಯಿಲ್ಲ, ಆಯವ್ಯಯದಲ್ಲಿ ಏನೂ ಇಲ್ಲ ಎಂದು ಹೇಳುತ್ತಾ ನನ್ನ ಸ್ನೇಹಿತರೊಬ್ಬರು ಇನ್ನೂ ಮುಂದಕ್ಕೆ ಹೋದರು.

ಛೇರ್ಮನ್ : ರಾಮ್ಯಯನವರೇ, ಸ್ವಲ್ಪ ಇರಿ. ಒಂದು ನಿಮಿಷ ಒಬ್ಬರು ಯಾರಾದರೂ ಎದ್ದುನಿಂತು ಹೇಳಿದರೆ ಸರಿಯಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಅವರು ಹೇಳಿದಾಗ ನಾನು ಸುಮ್ಮನೆ ಕುಳಿತಿದ್ದೆ. ನಾನು ಹೇಳಿದ್ದು ರಾಜ್ಯಪಾಲರ ಭಾಷಣದ ಬಗ್ಗೆ ಅಲ್ಲ. ಆಯವ್ಯಯದ ಮೇಲೆ ನಾನು ಕೇಳಿದ್ದೆ. ಎರಡೂ ಆಯವ್ಯಯವನ್ನು ಈಗ ತೋರಿಸಿ ನೋಡೋಣ. ಈ ಆಯವ್ಯಯ ಯಾವುದು ಸುಂದರವಾಗಿದೆಯೆಂದು ಕೇಳಿದಿರಲ್ಲ.....

ಛೇರ್ಮನ್ : ಅದಲ್ಲ ಬಿಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೇ, ಹಿರಿಯ ಸದಸ್ಯರಾದ ಶ್ರೀ ರಾಮಯ್ಯನವರು ಆವೇಶದಲ್ಲಿ ಆ ಕಾಂಗ್ರೆಸ್ ವ್ಯಾನಿಫೆಸ್ಟೊ ಜತೆ ಗುಂಡು ತೋರಿಸುವುದರ ಬಗ್ಗೆ ಹೇಳಿಸುತ್ತ ಕೆಲವು ಶಬ್ದಗಳನ್ನು ಏನು ಪ್ರಯೋಗಿಸಿದ್ದಾರೆ ಅದು ಈ ಸದನಕ್ಕೆ ಭೂಷಣ ಆಲ್ಲ. ಅದನ್ನು ತಾವು ಮಾಪಸ್ಸು ತೆಗೆಸಬೇಕು.

(ಗೊಂದಲ)

ಛೇರ್ಮನ್ : ತೆಗೆಸಿ ಹಾಕೋಣ ಬಿಡಿ.

ಶ್ರೀ ವೈ.ಕೆ.ರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾನು ತಮ್ಮನ್ನು ಕನ್ವಿನ್ಸ್ ಮಾಡುತ್ತೇನೆ. ನನ್ನ 25 ವರ್ಷ ಸಂಸದೀಯ ಜೀವನದಲ್ಲಿ ಯಾವ ಪದವನ್ನೂ ತೆಗೆದುಹಾಕಿದ್ದಿಲ್ಲ.

ಛೇರ್ಮನ್ : ನೀವು ಆ ಅರ್ಥದಲ್ಲಿ ಹೇಳಿಲ್ಲ. ಆದರ ಅರ್ಥ ಹಾಗೆ ಆಗಬಾರದು. ಆದು ರೆಕಾರ್ಡಿನಲ್ಲಿ ಹೋಗಿಬಿಟ್ಟಿದೆ.

ಶ್ರೀ ವೈ.ಕೆ. ರಾಮಯ್ಯ : ಅರ್ಥ ಏನಿಲ್ಲ, ಗಂಡು ಕೇಳುವುದಕ್ಕೆ ಹೋದಾಗ ನಮ್ಮ ಹುಡುಗನ ಕೈ ಇಷ್ಟು ಉದ್ದವಿದೆ, ಕಾಲು ಇಷ್ಟು ಉದ್ದವಿದೆ, ಅವನ ಮುಖ ಇಷ್ಟು ದಪ್ಪವಿದೆ....

ಒಬ್ಬ ಸದಸ್ಯರು : ತಾವು ಕೈ ಎಂದು ಹೇಳಲಿಲ್ಲ.

ಶ್ರೀ ವೈ.ಕೆ. ರಾಮಯ್ಯ ಹೌದು, ನಾನು ಹೇಳಿರುವುದು ಕೈಗೆ. ಆಯ್ತಾ?

(ಗೊಂದಲ)

ಛೇರ್ಮನ್ : ಅವರು 'ಕೈ' ಎಂದು ಹೇಳಿದಲ್ಲ?

ಒಬ್ಬ ಸದಸ್ಯರು : 'ಕೈ' ಅನ್ನುವುದನ್ನು ಸೇರಿಸಿಕೊಳ್ಳಬೇಕು.

ಛೇರ್ಮನ್ : ಆಯಿತು. ಈಗ ಅವರು ವಿವರಣೆ ಕೊಟ್ಟಿರುವುದರಿಂದ ನಾವು ಮುಂದಕ್ಕೆ ಹೋಗೋಣ.

ಶ್ರೀ ವೈ.ಕೆ. ರಾಮಯ್ಯ : ನಾನು ಹೇಳಿರುವುದ ಕೈಗೆ ಸ್ವಾಮಿ. ನಮ್ಮ ಕಡೆ ಎಲ್ಲಿಯಾದರೂ ಸ್ವಲ್ಪ ಗಳಗಿಳ ಸವರಬೇಕಾದರೆ, ಬದೆ ಸವರಬೇಕಾದರೆ, ಬೇಲಿ ಸದವಬೇಕಾದರೆ ಕೈ ಸ್ವಲ್ಪ ಉದ್ದವಾಗಿರಬೇಕು. ಅದಕ್ಕೇ ನಾವು ಕೈ ಉದ್ದವಿರುವ ಗಂಡು ಹುಡುಕುತ್ತೇವೆ. ಈಗ ಸಮಾಧನ ಆಯಿತಾ?

ಛೇರ್ಮನ್ : ಕೈ ತೋರಿಸಿದರೆ ಸರಿ. ಮುಂದುವರಿಸಿ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಎಲ್ಲಿಯವರೆಗೆ ಈ ಆಯವ್ಯಯ ಸರಿಯಾಗಿಲ್ಲ ಎಂದು ಹೇಳುತ್ತ ಪದಪ್ರಯೋಗ ನಡೆಯಿತು ಎಂದರೆ 'ಇದು ಮುಖ್ಯ ಮಂತ್ರಿಗಳ ಬೊಗಳೆ ಭಾಷಣ' ಎಂದರು. ಅಧ್ಯಕ್ಷರು ಅದನ್ನೂ ತೆಗೆದುಹಾಕಲಿಲ್ಲ. ಅದನ್ನೂ ಕಡತದಲ್ಲಿದೆ. ನಾನು ಉದ್ದ ಕೈ ಇರುವ ಗಂಡು ಬೇಕು ಎಂದು ಹೇಳಿರುವುದನ್ನು ಏಕೆ ತೆಗೆದುಹಾಕುತ್ತೀರಿ? ಆಯವ್ಯಯ ಭಾಷಣದ ಬಗ್ಗೆ ಹೇಳುತ್ತಾ 'ಇದು

ಮುಖ್ಯಮಂತ್ರಿಗಳ ಬೊಗಳೆ ಭಾಷಣ' ಎಂದು ಹೇಳಿದರು. ನಾನು ಸುಮ್ಮನೆ ಕೇಳುತ್ತಾ ಕುಳಿತಿದ್ದೆ. ಆದರೆ, ಅದನ್ನು ಹೇಳಿದವರು which is the best for judge ಅದನ್ನು ಅವರು ಹೇಳದೇ ಇದ್ದಿದ್ದರೆ ನಾನು ಸಂತೋಷಪಡುತ್ತಿದ್ದೆ. which is the best for judge ಅಧ್ಯಕ್ಷರೇ, ನಾನು ಆರ್ಥಿಕ ತಜ್ಞ ಅಲ್ಲ. ಪ್ರೊ : ವೆಂಕಟಗಿರಿಗೌಡರು ಕೊಟ್ಟಿರುವ ಪ್ರಶ್ನೆಗಳನ್ನು ಊರುಹಚ್ಚಿ ಎಕನಾಮಿಕ್ಸ್ ಪಾಸ್ ಮಾಡಿದವನು ನಾನು. ಆದರೆ ಯಾರು ಅರ್ಥಶಾಸ್ತ್ರಜ್ಞರು ಮಾಡಿದ ವ್ಯಾಖ್ಯಾನವನ್ನು ಮಾತ್ರ ಓದಿದರೆ - which is the best for judge ಅವರು ಹೇಳುತ್ತಾರೆ ಉತ್ತಮವಾದಂಥ ಆಯವ್ಯಯ ಯಾವುದು ಎಂದರೆ ತೆರಿಗೆ ಕಡಿಮೆ ಇರತಕ್ಕಂಥಾದ್ದು, ಅಭಿವೃದ್ಧಿ ಕೆಲಸಗಳಿಗೆ ಹಣವನ್ನು ಹೆಚ್ಚಿಗೆ ಮಾಡುವಂಥಾದ್ದು ಎಂದು. ತೆರಿಗೆಯನ್ನೇ ಹಾಕಬೇಡಿ, ಹಣ ಅಭಿವೃದ್ಧಿಗೆ ಜಾಸ್ತಿ ಖರ್ಚು ಮಾಡುವಂಥ ಆಯವ್ಯಯವನ್ನು ಹೇಗೆ ತರುವುದಕ್ಕೆ ಆಗುತ್ತದೆ? Yes, it is possible. ಅವರು ಅದಕ್ಕೂ ಮುಂದೆ ಹೇಳುತ್ತಾರೆ. ಅದನ್ನು ಹೇಗೆ ಸಾಧಿಸಬಹುದು ಎಂದರೆ ಸೋರಿಕೆಗಳನ್ನು ತಡೆಯುವುದು, ಸಂಪತ್ತಿನ ಕ್ರೋಢೀಕರಣ ಜಾಸ್ತಿ ಮಾಡುವುದು. ಇದರ ಮೂಲಕ ಸಂಪತ್ತನ್ನು ಕ್ರೋಢೀಕರಿಸಿಕೊಂಡು Less tax, more expenditure for the welfare programme is the best budget. ಬಹುಶಃ ಈ ಒಂದು ದೃಷ್ಟಿಯಿಂದ ನಾನು ಈ ವರ್ಷ ನಮ್ಮ ಸರ್ಕಾರ ತಿಂದಿರುವಂಥ ಆಯವ್ಯಯ ಒಂದು ಉತ್ತಮವಾದಂಥ ಆಯವ್ಯಯ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಈ ನಾರ್ಮ್ಸ್‌ನ್ನು, ಸ್ಟ್ಯಾಂಡರ್ಡ್‌ನ್ನು ಅಪ್ಲೈ ಮಾಡಿ ನಾವು ಪಕ್ಷ ಬಿಟ್ಟು ನೋಡಿದಾಗ, ಇದನ್ನು ಗಂಭೀರವಾಗಿ ತೆಗೆದುಕೊಂಡು ಓದಿದರೆ- ರಿಸೋರ್ಸಸ್ ಮೊಬಿಲೈಸೇಶನ್ ಮಾಡುವುದು ಮತ್ತು ಸೋರಿಕೆಯನ್ನು ತಡೆಯುವುದು, ಅಭಿವೃದ್ಧಿ ಕೆಲಸಗಳಿಗೆ ಹಣವನ್ನು ಹೆಚ್ಚಾಗಿ ವೆಚ್ಚ ಮಾಡುವುದು- ಈ ಒಂದು ಕ್ಯಾರಕ್ಟರಿಸ್ಟಿಕ್‌ನ್ನು ಅಪ್ಲೈ ಮಾಡಿದಾಗ ಇದು ಒಂದು ಉತ್ತಮವಾದಂಥ ಭಾಷಣ ಎಂದು ಹೇಳುವುದಕ್ಕೆ ನಾನು ಇಷ್ಟ ಪಡುತ್ತೇನೆ. ಅಧ್ಯಕ್ಷರೇ, ಈ ರಾಜ್ಯಪಾಲರ ಭಾಷಣದ ಬಗ್ಗೆ ನನಗೆ ಒಂದು ಗಂಭೀರವಾದಂಥ ಅನುಮಾನ ಇದೆ. ಅದು ಏನಪ್ಪ ಎಂದರೆ 'ಸುಳ್ಳು' ಎನ್ನುವ ಪದವನ್ನು ಉಪಯೋಗಿಸಬಹುದೇ ಬೇಡವೇ ಎನ್ನುವುದರ ಬಗ್ಗೆ ವ್ಯಾಖ್ಯಾನ ಇರುವುದರಿಂದ ನಾನು ಸುಳ್ಳು ಎನ್ನುವುದನ್ನು ಉಪಯೋಗಿಸದೇನೆ ಸತ್ಯಕ್ಕೆ ದೂರವಾದಂಥ ಮಾತನ್ನು ರಾಜ್ಯಪಾಲರ ಭಾಷಣ ಮುಖಾಂತರ ಅವರ ಭಾಷಣದಲ್ಲಿ ಈ ಸದನದಲ್ಲಿ ಹೇಳಿಸಲಿಕ್ಕೆ ಸಾಧ್ಯತೆ ಇದೆಯೆ? ಸತ್ಯಕ್ಕೆ ದೂರವಾದಂಥ ಸುಳ್ಳು ಮಾತನ್ನು ಹೇಳಿಸುವುದು ಅಷ್ಟೇ ಅಲ್ಲ, ಆ ಸುಳ್ಳು ಮಾತನ್ನು ಹೇಳುವ ಮೂಲಕ ರಾಜ್ಯದ ಜನತೆಯನ್ನು ಮೋಸಗೊಳಿಸುವುದಕ್ಕೆ ಸಾಧ್ಯನಾ? ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸುಳ್ಳು ವಿಷಯವನ್ನು ಓದಿದರೆ ಅದಕ್ಕೆ ಎಲ್ಲಿಯಾದರೂ ಶಿಕ್ಷೆ ಇದೆಯಾ? ನಾನು ಎಲ್ಲಿಂದ ಎಲ್ಲಿಗೆ ಹೋಗುತ್ತಿದ್ದೇನೆ ಎಂದು ಯಾರೂ ಭಾವಿಸಬೇಕಾದ ಅವಶ್ಯಕತೆ ಇಲ್ಲ. ಅದು ನಡೆದುಹೋಗಿದೆ. ಎಲ್ಲೂ ನಡೆದಿಲ್ಲ, ಕರ್ನಾಟಕದಲ್ಲಿ ನಡೆದಿದೆ. ಇವತ್ತು ನಡೆದಿಲ್ಲ, ಕಳೆದ ವರ್ಷ ನಡೆದಿದೆ. ಆದ್ದರಿಂದ ಈ ರಾಜ್ಯಪಾಲರು ಮಾಡಿದಂಥ ಅವರ ಭಾಷಣದಲ್ಲಿ ಕೊಟ್ಟಿರುವಂಥ ಸುಳ್ಳು ಹೇಳಿಕೆಯೊಂದನ್ನು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇದು ಸುಳ್ಳು ಭಾಷಣ, ಸತ್ಯಕ್ಕೆ ದೂರವಾದಂಥ ಭಾಷಣ ಎನ್ನುವುದನ್ನು ನಾನು ಗುರುತು ಪಡಿಸಲು, ಸಾಬೀತುಪಡಿಸಲು ಸಿದ್ದನಿದ್ದೇನೆ. ಇದು ಕಳೆದ ವರ್ಷ ರಾಜ್ಯಪಾಲರ ಭಾಷಣದ 28ನೇ ಕಲುಮು, ಕಾವೇರಿ ನೀರಿನ ಟ್ರಿಬ್ಯುನಲ್ ವಿಷಯದಲ್ಲಿ ಇರುವುದನ್ನು ಓದುವುದಕ್ಕೆ ಮೊದಲು ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. "In order to resolve the Inter state dispute between Karnataka, Tamil Nadu and Kerala, the Central Government have

constituted a Tribunal ". I am emphasising the word "Tribunal" not the "Authority", "inspite of the much opposition by the State". ಇದು ಈ ಸರ್ಕಾರದ ವಿರೋಧ ಇದ್ದಾಗ್ಯೂ ಕೂಡ ಈ ನೀರಿನ ವಿವಾದವನ್ನು ಬಗೆಹರಿಸುವುದಕ್ಕೆ ಕೇಂದ್ರ ಸರ್ಕಾರ ಒಂದು ನ್ಯಾಯ ಮಂಡಲಿಯನ್ನು ರಚನೆ ಮಾಡಿದೆ. ಈ ನ್ಯಾಯ ಮಂಡಲಿ ಒಂದು ಮಧ್ಯಂತರ ವರದಿಯನ್ನು ಕೊಟ್ಟಿದೆ. ಇದರ ಬಗ್ಗೆ ಪ್ರಸ್ತಾಪ ಮಾಡುತ್ತ ರಾಜ್ಯಪಾಲರು 1999ರ ಅವರ ಭಾಷಣದಲ್ಲಿ ಈ ರೀತಿ ಹೇಳುತ್ತಾರೆ - "The consistent stand of the Government that the river water disputes are to be resolved amicably through the negotiations among the riparian states keeping in view the interest of the farmers, has been vihdicated bu the constitution of the cavuery River Authority." Here, I am again emphasising the word"Authority." "It is the first of its kind in the history of solving the National Water dispute. The prime Minister is designed as the Chairman, The Chief Ministers of the Basintates are the Members of the Authority. This has given a new dimension in resolving the river water dispute."

ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದ್ದೇನೆ. ಹೋದ ಒಂದು ಸಭೆಯಲ್ಲಿ ನಾನು ಐದು ವರ್ಷ ದಿಂದ ಈ ಸದನದಲ್ಲಿ ಇರಲಿಲ್ಲ. ವಿಧಿ ಇಲ್ಲದೆ ಊರೂರಿನಲ್ಲಿ ಭಾಷಣ ಮಾಡಬೇಕಾಗಿ ಬಂತು.Because this was the issue in Karnataka at that time. ಯಾವ ಮಧ್ಯಂತರ ತೀರ್ಪನ್ನು ಜಾರಿಗೊಳಿಸುವುದನ್ನು ಈ ಎಲ್ಲ ಸ್ನೇಹಿತರು ವಿರೋಧ ಮಾಡಿದರು, ಈ ಸದನದಲ್ಲಿ ರೆಸ್ಯೂಲೇಶನ್. ಠರಾವು ಪಾಸ್ ಆಗಿತ್ತು. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಈ ಠರಾವು ಆಗಿತ್ತು. ಈ ಮಧ್ಯಂತರ ತೀರ್ಪನ್ನು ಜಾರಿಗೊಳಿಸುವುದಕ್ಕೆ ಕರ್ನಾಟಕ ಸರ್ಕಾರ ಸಿದ್ಧವಿಲ್ಲ. "We are not going to implement the interim order passed by the Tribunal"ಎಂದು ಅದು ಬಹಳ ದಿವಸ ನಡೆಯಿತು. ಆದಾದ ಮೇಲೆ ಏನೇನೋ ಆಯಿತು. ಅದನ್ನು ಯಾರ್ಯಾರು ವಿರೋಧ ಮಾಡಿದ್ದರೋ, ಅವರೇ ಅದಕ್ಕೆ ಒಪ್ಪಿಗೆ ಕೊಟ್ಟರು, ಏನೋ ಆಯಿತು. ಭಾರತೀಯ ಜನತಾಪಕ್ಷ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಮೇಲೆ ಪಾಜಪೇಯಿ ಅವರು ಅಲ್ಲಿ ಪ್ರಧಾನಮಂತ್ರಿ ಆದಮೇಲೆ ಈ ಮಧ್ಯಂತರ ತೀರ್ಪನ್ನು ಜಾರಿಗೊಳಿಸುವುದಕ್ಕಾಗಿ ಒಂದು ಅಥಾರಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದರು. ಇದನ್ನು ಬಹುಶಃ ಯಾರೂ ಡಿಸ್‌ಪ್ಯೂಟ್ ಮಾಡಲಾರರು. Because it is a hard fact. The Cental Government have constituted an Authority. Why? Not to resolve the dispute, but to implement the interim order. This was the difference . ಆದರೆ ಅಧ್ಯಕ್ಷರೇ, ಈ ರಾಜ್ಯಪಾಲರ ಭಾಷಣದಲ್ಲಿ ಈ ರಾಜ್ಯಗಳ ಮಧ್ಯೆ ಇರುವ ನೀರಿನ ವ್ಯಾಜ್ಯವನ್ನು ಪರಿಹರಿಸುವುದಕ್ಕಾಗಿ ಅಥಾರಿಟಿಯನ್ನು, ಒಂದು ಪ್ರಾಧಿಕಾರವನ್ನು ರಚನೆ ಮಾಡಿದ್ದಾರೆ ಎನ್ನುವಂಥ ಸುಳ್ಳನ್ನು, ಸತ್ಯಕ್ಕೆ ದೂರವಾದ ವಿಷಯವನ್ನು ಅವರ ಭಾಷಣದಲ್ಲಿ ಹೇಳಿಸಿ, ಈ ರಾಜ್ಯದ ಜನರನ್ನು ಅಡ್ಡದಾರಿಗೆ ಎಳೆದಿದ್ದಾರೆ, ಮೋಸಕ್ಕೆ ಒಳಗು ಮಾಡಿದ್ದಾರೆ. ನಾನು ಈ ವಿಷಯವನ್ನು ಸದನದಲ್ಲಿ, ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಚರ್ಚೆಗೆ ಬಿಡಲಿಕ್ಕೆ ಇಷ್ಟಪಡುತ್ತೇನೆ. Whethere the Government can lie in its speech? Is there any punishment for such a thing in the Constitution? ಇದರ ಬಗ್ಗೆ ಚರ್ಚೆ ಆಗಬೇಕು. ನಾನು ಆಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಹೇಳಿದ ಯಾವುದೇ ಮಾತಿನಲ್ಲಿ ತಪ್ಪಿದ್ದರೆ, ಅದಕ್ಕೆ ಬೇಕಾದ

ಶಿಕ್ಷೆಯನ್ನು ನಾನು ಅನುಭವಿಸುತ್ತೇನೆ. ಪ್ರಾಧಿಕಾರವನ್ನು ರಚನೆ ಮಾಡಿದ್ದು ಕೇಂದ್ರ ಸರ್ಕಾರ. ಇದರ ಉದ್ದೇಶ ಮಧ್ಯಂತರ ತೀರ್ಪಿನಲ್ಲಿ ಏನು ತೀರ್ಮಾನವನ್ನು ಕೊಟ್ಟಿದ್ದಾರೆ, ಅದನ್ನು ಜಾರಿಗೊಳಿಸವುದಕ್ಕಾಗಿ ಆದರೆ, ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಮುಖಾಂತರ ಈ ರಾಜ್ಯದ ಜನತೆಗೆ, ಈ ಸದನದಲ್ಲಿ ಅವತ್ತು ಕುಳಿತಿದ್ದ ಸದಸ್ಯರಿಗೆ ಭಾಷಣ ಮಾಡಿಸುತ್ತಾರೆ. ರಾಜ್ಯಗಳ ಮಧ್ಯದಲ್ಲಿರುವ ನೀರಾವರಿ ವ್ಯಾಜ್ಯವನ್ನು ತೀರ್ಮಾನ ಮಾಡುವುದಕ್ಕೆ ಒಂದು ಪ್ರಾಧಿಕಾರವನ್ನು ರಚನೆ ಮಾಡಿದ್ದೇವೆಂದು, and they claim that it is a feather in their cap. ಕಾವೇರಿ ಕೊಳ್ಳದ ಜನರ ಕೊರಳನ್ನು ಕೊಯ್ದಂಥ ಜನರ ನಡವಳಿಕೆಯನ್ನು, by agreeing for the constitution of an authority, they have withdrawn the confidence of the people during 1994 elections. ಸಮೃದ್ಧ ಕರ್ನಾಟಕವನ್ನು ಕಟ್ಟುತ್ತೇವೆಂದು ಹೇಳಿ ಅಧಿಕಾರಕ್ಕೆ ಬಂದಂಥ ಜನ, ಯಾವ ಮಧ್ಯಂತರ ತೀರ್ಪನ್ನು ಜಾರಿಗೊಳಿಸುವುದಿಲ್ಲವೆಂದು ಹೇಳಿದ್ದರೋ, ಆ ಮಧ್ಯಂತರ ತೀರ್ಪನ್ನು ಜಾರಿಗೊಳಿಸುವುದಕ್ಕೆ ಒಪ್ಪಿಗೆ ಕೊಡುವುದರ ಮೂಲಕ ಕಾವೇರಿ ಕೊಳ್ಳದ ಜನರ ಕೊರಳನ್ನು ಕೊಯ್ದಂಥ ಜನ, ಇವರ ನಡವಳಿಕೆಯನ್ನು ಅಲ್ಲಿಗೆ ನಿಲ್ಲಿಸಲಿಲ್ಲ. ನಾನು ಮುಂದಕ್ಕೆ ಪದಪ್ರಯೋಗದ ಮಾತನ್ನು ಹೇಳಬೇಕಾಗುತ್ತೆ. ಇದು ನೀಚತನದ ಪರಮಾವಧಿ. ಒಂದು ಮಾತನ್ನು ನನ್ನ ಸ್ನೇಹಿತರಾದ ಸೋಮಶೇಖರ್‌ರವರು ಹೇಳಿದರು. ನಿಮ್ಮನ್ನು ಪ್ರೀತಿಯಿಂದ ಜನ ಗೆಲ್ಲಿಸಲಿಲ್ಲ, ಹೌದು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ರೊಚ್ಚಿಗೆದ್ದು ಜನ ನಿಮ್ಮನ್ನು ಗೆಲ್ಲಿಸಿದರು ಎಂದು ನಮ್ಮ ಕಡೆ ಬೆರಳು ತೋರಿಸಿದರು. ಇದು ನೂರಕ್ಕೆ ನೂರು ಸತ್ಯವಾದಂಥ ಮಾತು. It is true that it is an anti-establishment vote. What is that anti-establishment? Who is responsible for that and who was in power at that time? ಸನ್ಮಾನ್ಯ ಅಧ್ಯಕ್ಷರೇ, ನಾನು ತಮ್ಮನ್ನು ಮತ್ತು ತಮ್ಮ ಮೂಲಕ ನನ್ನ ಸ್ನೇಹಿತರನ್ನು ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದು ಇಷ್ಟೆ. "The Prime Minister is designated as the Chairman." "This has given a new dimension to resolve the river water dispute."As I said, I am not an authprity on any matter. I am an ordinary man. Let this matter be refered to any right thinking persons. Let there be a committee. I request the Chief Minister to constitute a committee on this matter. ದಯಮಾಡಿ ಕ್ಷಮಿಸಬೇಕು. ನನಗೆ ಕನ್ನಡದ ಕಾಪಿ ಸಿಕ್ಕಲಿಲ್ಲ. ಇಂಗ್ಲೀಷ್ ಕಾಪಿ ಸಿಕ್ಕಿದ್ದರಿಂದ ಅದನ್ನೇ ಓದಬೇಕಾಗಿದೆ. "This has given a new dimension in resolving the river water dispute." ಯಾವ ಪ್ರಾಧಿಕಾರವನ್ನು ಮಧ್ಯಂತರ ತೀರ್ಪನ್ನು ಜಾರಿಗೊಳಿಸುವುದಕ್ಕೆ, ಉಸ್ತುವಾರಿ ನೋಡಿಕೊಳ್ಳುವುದಕ್ಕೆ ರಚನೆ ಮಾಡಿದರೋ, ಆ ಪ್ರಾಧಿಕಾರ ನೀರಿನ ವಿಷಯವನ್ನು ತೀರ್ಮಾನ ಮಾಡುವುದಕ್ಕೆ ಮಾಡಿದ್ದು ಎಂದು ಹೇಳಿ ರಾಜ್ಯಪಾಲರ ಮುಖಾಂತರ ಭಾಷಣವನ್ನು ಮಾಡಿಸಿ, ಈ ರಾಜ್ಯದ ಜನತೆಗೆ ಮೋಸವನ್ನು ಮಾಡಿದಂಥ ಈ ಸುಳ್ಳಿನ ನಡವಳಿಕೆಗೆ ಯಾವ ಶಿಕ್ಷೆ ಕೊಡಬೇಕೋ ನನಗೆ ಗೊತ್ತಿಲ್ಲ. ತಾವು ಆ ತೀರ್ಮಾನವನ್ನು ಮಾಡಬೇಕು. ಇದು ಅಲ್ಲಿಗೇ ನಿಲ್ಲಲಿಲ್ಲ.

ಛೇರ್ಮನ್ : ಮಾನ್ಯ ರಾಮಯ್ಯನವರೇ, ನೀವು ಸುಳ್ಳು, ಸುಳ್ಳು ಎಂದು ಎರಡು ಮೂರು ಸಾರಿ ಹೇಳಿದಿರಿ. ಇವೆಲ್ಲಾ ಅನ್‌ಪಾರ್ಲಿಮೆಂಟರಿ ಪದಗಳಾಗುತ್ತವೆ. ಇವುಗಳನ್ನು ಮಾಡಿ. ಸತ್ಯಕ್ಕೆ ದೂರವಾದುದು ಎಂದು ಹೇಳಿ.

ಶ್ರೀ ವೈ.ಕೆ. ರಾಮಯ್ಯ: ಮೊನ್ನೆ ಯಡಿಯೂರು ಜಾತ್ರೆಯಾಗುತ್ತಾ ಇದೆ, ಕರೆಂಟ್ ಇಲ್ಲ, ನಾನು ನಿದ್ದೆ ಮಾಡುವುದಕ್ಕೆ ಬಿಡುತ್ತಾ ಇಲ್ಲ. ಜನ ಎಲ್ಲಾ ಬೈಯ್ಯುತ್ತಿದ್ದಾರೆ ಎಂದು ಯಾರೋ ಒಬ್ಬರು ಮೊನ್ನೆ ಹೇಳುತ್ತಾ

ಇದ್ದರು. ಅದಕ್ಕೆ, ನೀವು ರಾಜಕಾರಣಿಗಳು ಇರುವುದೇ ಬೈಸಿಕೊಳ್ಳುವುದಕ್ಕೆ ಎಂದು ಹೇಳುತ್ತಿದ್ದಾರೆ. ಇಲ್ಲಿ ಕೆ.ಇ.ಬಿ. ಮಂತ್ರಿಗಳು ಇದ್ದಾರೋ ಏನೋ ನನಗೆ ಗೊತ್ತಿಲ್ಲ. How courageous he is ? How adamant he is ? ನೀವು ಇರುವುದೇ ಬೈಸಿಕೊಳ್ಳುವುದಕ್ಕೆ ನಾವೇನೋ ಬಿಡಿ. We are the last resort of the Scoundrals. ಎಲ್ಲಿಯೂ ಸಲ್ಲದವರು. ರಾಜ್ಯಪಾಲರು ಎಲ್ಲಾ ಕಡೆಯೂ ಸಲ್ಲುವಂತಹವರು ಆ ಸ್ಥಾನಕ್ಕೆ ಗೌರವ ಇದೆ. ಅವರ ಮಾತಿಗೆ ಪೂಜ್ಯ ಭಾವನೆ ಇದೆ. ಇಲ್ಲಿ ಅವರು ಬಂದಾಗ ನಾವೆಲ್ಲಾ ಎದ್ದುನಿಂತುಕೊಳ್ಳುತ್ತೇವೆ. ದೇವರು ಬಂದಹಾಗೆ, ನಮ್ಮ ಕಡೆ ದೇವರು ಬಂದಾಗ ಎದ್ದು ನಿಲುತ್ತೇವಲ್ಲ ಹಾಗೆ. ಅಷ್ಟೊಂದು ಗೌರವಪೂರ್ವಕವಾಗಿ ನಾವು ಅವರನ್ನು ಕಾಣುತ್ತೇವೆ. ಅಂತಹವರ ಕೈಯಲ್ಲಿ ನೀವು XXX ಹೇಳಿಸಿದ್ದೀರಲ್ಲ ಸ್ವಾಮಿ. ನಿಮ್ಮ x x x ಹೇಳಿಸುವಂತಹ ನೀಚತನ ಅಲ್ಲಿಗೇ ನಿಲ್ಲಲಿಲ್ಲ.

ಒಬ್ಬ ಮಾನ್ಯ ಸದಸ್ಯರು : ಪುನಃ ಅವರು ಸುಳ್ಳು, ಸುಳ್ಳು ಎಂದೇ ಹೇಳುತ್ತಾ ಬರುತ್ತಿದ್ದಾರೆ...

ಶ್ರೀ ವೈ. ಕೆ. ರಾಮಯ್ಯ : ಕ್ಷಮಿಸಿ, ಸತ್ಯಕ್ಕೆ ದೂರವಾದ ಮಾತು.

ಶ್ರೀ ಕೆ. ಹೆಚ್. ರಂಗನಾಥ್ : ಸುಳ್ಳು ಎಂಬ ಪದವನ್ನು ಹೇಳಬಹುದೆಂದು ಈ ಸಭೆಯಲ್ಲಿಯೇ ಅಧ್ಯಕ್ಷರು ತೀರ್ಮಾನ ಕೊಟ್ಟಿದ್ದಾರೆ.

ಶ್ರೀ ವೈ. ಕೆ. ರಾಮಯ್ಯ : ಆಯಿತು. ಹಿರಿಯರು ಹೇಳಿದ ಮಾತನ್ನು ಕೇಳೋಣ.

ಶ್ರೀ ಎಸ್. ಎಸ್. ಪಾಟೀಲ್ : ನಮ್ಮ ಕಡೆ ಒಂದು ಗಾದೆ ಇದೆ. ಅಳಿಯ ಅಲ್ಲ, ಮಗಳ ಗಂಡ ಎಂದು ಹಾಗೆಯೇ ಸುಳ್ಳು, ಸತ್ಯಕ್ಕೆ ದೂರವಾದ ಮಾತು. ಸುಳ್ಳು ಎಂದು ಹೇಳಿದರೆ ತಪ್ಪೇನಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಅಧ್ಯಕ್ಷರೇ, ಶ್ರೀಮಾನ್ ವೈ. ಕೆ. ರಾಮಯ್ಯನವರು ನಮ್ಮ ಜೊತೆಯಲ್ಲಿ ಇದ್ದವರು. ಬಹಳಷ್ಟು ವರ್ಷಗಳ ಕಾಲ ನಮ್ಮ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿದ್ದವರು. ಕಾವೇರಿಗೆ ಸಂಬಂಧಪಟ್ಟಂತೆ ಎಲ್ಲಾ ವಿಚಾರದಲ್ಲೂ ಸಹಿತ ನಮ್ಮ ಪಕ್ಷ, ಏಕೆಂದರೆ ಸರ್ಕಾರಗಳೆಲ್ಲಾ ಆಯಾ ಪಕ್ಷದ ಆದೇಶದಂತೆ ನಡೆಯುವುದು. ನಮ್ಮ ಪಕ್ಷ ಏನು ತೀರ್ಮಾನವನ್ನು ತೆಗೆದುಕೊಂಡಿತ್ತು, ಆ ತೀರ್ಮಾನಕ್ಕೆ ಬೇರೆ ಅಭಿಪ್ರಾಯವನ್ನು ಶ್ರೀಮಾನ್ ವೈ. ಕೆ. ರಾಮಯ್ಯನವರು ಯಾವತ್ತೂ ಸಹಿತ ವ್ಯಕ್ತಮಾಡಿಲ್ಲ. ಪಕ್ಷದ ವೇದಿಕೆಯಲ್ಲಾಗಲೀ ಅಥವಾ ಸಚಿವ ಸಂಪುಟದಲ್ಲಾಗಲೀ ಹೇಳಿಲ್ಲ. ಇದು ಮೊದಲನೆಯದು. ಎರಡನೆಯದಾಗಿ, ಅವರು ಏನು ಹೇಳುತ್ತಿದ್ದಾರೆ. 2000 ಇಸವಿಯಲ್ಲಿ ಮಾಡಿರತಕ್ಕ ರಾಜ್ಯಪಾಲರ ಭಾಷಣದ ಬಗ್ಗೆ ಅವರಿನ್ನೂ ಬಂದಿಲ್ಲ. 1999ರಲ್ಲಿ ಅವತ್ತಿನ ಜೆ. ಹೆಚ್. ಪಟೇಲರ ಸರ್ಕಾರ ರಾಜ್ಯಪಾಲರ ಮೂಲಕ ಸತ್ಯಕ್ಕೆ ದೂರವಾದ ವಿಷಯಗಳನ್ನು ಹೇಳಿ ನೀಚತನವನ್ನು ಮಾಡಿತು ಎನ್ನುವ ವಿಚಾರವನ್ನು ಅವರು ಹೇಳಿದ್ದಾರೆ. ನಾವು ನೀಚರು ಎಂದೇ ಜನ ನಮ್ಮನ್ನು ಈ ಕಡೆ ಕೂರಿಸಿದ್ದಾರೆ ಎಂಬುದನ್ನು ನಾವು ಒಪ್ಪಿಕೊಂಡಿದ್ದೇವೆ. ಜೆ. ಹೆಚ್. ಪಟೇಲರು ಮತ್ತು ನಾವೆಲ್ಲಾ ಪರಮ ನೀಚರು. ನಾವು 18 ಜನಕ್ಕೆ ಇಳಿದಿದ್ದೇವೆ. ನಿಮಗೆ ಜನ ಪಾಸಿಟೀವ್ ಆಗಿ ಓಟು ಕೊಟ್ಟಿದ್ದಾರೆ 130 ಜನ ಗೆದಿದ್ದೀರಿ ಬಹಳ ಪಾಸಿಟೀವ್ ಆಕ್ಷನ್, ಸಿ. ಎಂ. ರವರು ಡಿಪೆಂಡ್ ಮಾಡಿಕೊಂಡಿದ್ದಾರೆ. ಇನ್ನೂ 25 ಜನಕ್ಕೆ ಸೇರಿಸಿಕೊಂಡಿದ್ದೀರಿ. ಇನ್ನೂ 5-6 ಜನರನ್ನು ಸೇರಿಸಿಕೊಳ್ಳಲೂಬಹುದು. ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ನಾನು ಹೇಳುವುದು,

---

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಈ ಕಾವೇರಿ ವಿವಾದದ ಬಗ್ಗೆ, ನಾವೆಲ್ಲಾ ಪರಮ ನೀಚರೇ. ಜೆ.ಹೆಚ್.ಪಟೇಲರು ಮತ್ತು ನಮ್ಮ ಸರ್ಕಾರದವರು ಬಹಳ ನೀಚ ಕೆಲಸವನ್ನು ಮಾಡಿಬಿಟ್ಟಿದ್ದೇವೆ. ಇವರು ಪೂರ್ವಕ್ಕೆ ಹರಿಯತಕ್ಕ ಹೊಳೆಗಳನ್ನೆಲ್ಲಾ ಪಶ್ಚಿಮಕ್ಕೆ ಹರಿಸಿ, ಕರ್ನಾಟಕದ ಸಮೃದ್ಧಿ ಮಾಡುವುದನ್ನು ನಾವು ಮುಂದೆ 5 ವರ್ಷದಲ್ಲಿ ನೋಡೋಮ. ನಾನು ಶ್ರೀಮಾನ್ ವೈ.ಕೆ. ರಾಮಯ್ಯನವರಿಗೆ ಕೇಳುತ್ತಾ ಇರುವುದೇನೆಂದರೆ, ಕಾವೇರಿ ವಿವಾದದ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾಗಿರುವುದು ನಿಜ. ಟ್ರೈಬ್ಯುನಲ್‌ಗೆ ಅವಾರ್ಡ್ ಕೊಟ್ಟಿರತಕ್ಕಂಥದ್ದು ನಿಜ. ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿಯವರು ಇಬ್ಬರು ಮುಖ್ಯಮಂತ್ರಿಗಳನ್ನೂ ಕರೆಸಿ ಅದಕ್ಕೊಂದು ರೆಗ್ಯುಲೇಟರಿ ಕಮಿಟಿ ಎಂದು ಮಾಡಿರತಕ್ಕಂಥಾದ್ದು ನಿಜ. ನೀರನ್ನು ಬಿಟ್ಟಿರತಕ್ಕಂಥಾದ್ದು ನಿಜ. ಇವೆಲ್ಲಾ ಸತ್ಯಾಂಶಗಳು, ಇದನ್ನೆಲ್ಲಾ ಯಾರೂ ಡಿನೈ ಮಾಡುವುದಕ್ಕಾಗುವುದಿಲ್ಲ. ಕೊನೇಪಕ್ಷ ಈ ಸದನಕ್ಕೆ ಅಥವಾ ರಾಜ್ಯಕ್ಕೆ ಅದನ್ನು ಬಿಟ್ಟು ಏನು ಮಾಡಬಹುದಿತ್ತು ಎಂಬುದನ್ನು ತಾವು ದಯವಿಟ್ಟು ಸಜೆಸ್ಟ್ ಮಾಡಿ.

ಶ್ರೀ ವೈ.ಕೆ. ರಾಮಯ್ಯ : ಕರ್ನಾಟಕ ರಾಜ್ಯದಲ್ಲಿರುವಂತಹ ನೀರಾವರಿ ಯೋಜನೆಗಳ ಅನುಷ್ಠಾನ ಅದರಲ್ಲೂ ಬೃಹತ್ ನೀರಾವರಿ ಯೋಜನೆಗಳ ಅನುಷ್ಠಾನದ ಬಗ್ಗೆ ಚರ್ಚೆ ಆಗಲೇಬೇಕೆಂದು ನಾನು ಅಧ್ಯಕ್ಷರಲ್ಲಿ ಹಠ ಹಿಡಿದಿದ್ದೇನೆ. ಆ ಅನುಷ್ಠಾನ ನಿಧಾನವಾಗಿರುವುದರ ಬಗ್ಗೆ ಚರ್ಚೆ ಮಾಡಬೇಕು. ನಾನು ಮುಖ್ಯಮಂತ್ರಿಗಳಲ್ಲೂ ಪ್ರಾರ್ಥನೆ ಮಾಡಿಕೊಂಡಿದ್ದೇನೆ. ಹಾಗೆ ಚರ್ಚೆ ಮಾಡುವಾಗ ನನ್ನ ಸ್ನೇಹಿತರು ಹೇಳಿದಂತಹ ಪ್ರಶ್ನೆಗೆ ಉತ್ತರ ಹೇಳುತ್ತೇನೆ. My contention is now confined to convince that the then government lied through the Governor's speech. ಕಾವೇರಿ ಬಗ್ಗೆ ಏನು ಮಾಡಬೇಕೆಂಬುದಕ್ಕೆ ನನ್ನ ಅಭಿಲಾಷೆ ಏನಿದೆಯೋ ನನಗೆ ಗೊತ್ತಿದೆ ಕೆಲವು ಸಂಗತಿಗಳು ಇವೆ ಆ ಸಂದರ್ಭದಲ್ಲಿ ಅವುಗಳನ್ನು ಹೇಳುತ್ತೇನೆ. ಅದು ಅಲ್ಲಿಗೇ ನಿಲ್ಲಲಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ರಾಜ್ಯಪಾಲರ ಮೂಲಕ ಈ ಭಾಷಣ ಮಾಡಿಸುತ್ತೇವಲ್ಲ ಇದೇನಿದು. ನನಗೆ ಗೊತ್ತಿಲ್ಲದೆ ಹೇಳುತ್ತಿದ್ದೇನೆ. ಇಂತಾದ್ದನ್ನೆಲ್ಲಾ ರಾಜ್ಯಪಾಲರ ಭಾಷಣದಲ್ಲಿ ಮಾಡುವುಕ್ಕೆ ಸಾಧ್ಯವೇ ಎಂದು ತಿಳಿದುಕೊಳ್ಳುವುದಕ್ಕೆ ಒಬ್ಬ ವಿದ್ಯಾರ್ಥಿಯಾಗಿ ಹೇಳುತ್ತಿದ್ದೇನೆ, ಮತ್ತೆ ಹೇಳುತ್ತಾರೆ, ಇದು 1990ರ ರಾಜ್ಯಪಾಲರ ಭಾಷಣ. "In coordination with the Japan International Co-operative Agency, a new and vigorous race of bivoltine silk work has been introduced." ಇದನ್ನು ಹಸಿ ಸುಳ್ಳು ಎಂದು ನಮ್ಮ ಕಡೆ ಹೇಳುತ್ತಾರೆ. I would like to know from anybody, not in Karnataka, in this country, is there any new bivoltine race that has been evolved. If so, tell me the name. Then why you have said so? ಅಧಿಕಾರಿಗಳು ಯಾವುದು ಇಲ್ಲವೆಂದು ಹೇಳುತ್ತಾರೆ. Then, why you have said? ನಮ್ಮ ಮುಖ್ಯ ಮಂತ್ರಿಗಳ ಅಯವ್ಯಯದ ಭಾಷಣ ಬೊಗಳೆ ಭಾಷಣ ಎಂದು ಅವರು ಹೇಳಿದ್ದಾರೆ. ಅದು ಕಡತದಲ್ಲಿದೆ. ಇದಕ್ಕೆ ಏನು ಹೇಳುತ್ತೀರಿ?

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಅಜೆಂಡಾದಲ್ಲಿ 'ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ' ಅಡಿಯಲ್ಲಿ "2000ದ ಮಾರ್ಚ್ 15ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ, ದಯಪಾಲಿಸಿ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ

ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ '' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇದರ ಮೇಲೆ ಈಗ ಚರ್ಚೆಯಾಗುತ್ತಿದೆ. ಆದರೆ ಮಾನ್ಯ ವೈ. ಕೆ. ರಾಮಯ್ಯನವರು ಕಳೆದ ಸದನದಲ್ಲಿ ಇರಲಿಲ್ಲ. ಆದರೆ ಅವರು ಈ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವುದರ ಬದಲಾಗಿ ಕಳೆದ ವರ್ಷದ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುತ್ತಿದ್ದಾರೆಯೋ ಎಂದು ಅನುಮಾನ ಬರುತ್ತಿದೆ.

ಶ್ರೀ ವೈ. ಕೆ. ರಾಮಯ್ಯ : ಒಂದು ನಿಮಿಷ ನನ್ನ ಸ್ನೇಹಿತರು ತಮ್ಮ ಸಹನೆ ತೋರಿದರೆ ನನ್ನ ವಾದವನ್ನು ಅದಕ್ಕೆ ತುಳುಕುಹಾಕುತ್ತೇನೆ. ಅವರ ಪ್ರಶ್ನೆಗೆ ಉತ್ತರವನ್ನು ಹೇಳುತ್ತೇನೆ. ಆದ್ದರಿಂದ ನಾನು, I am prepared to swear. I am aprepared to file an Affedavit that no new bivoltine race has been evolved in this country. ಬೇಕಾದರೆ ಇದ್ದರೆ ಹೇಳಿ, ಮಂತ್ರಿಗಳು ಇದ್ದಾರೆ. ಯಾವ ರೇಶಿಯೋ ಆದ್ದರಿಂದ ನಾನು ಇದನ್ನು ಕೇವಲ ಉದಾಹರಣೆಯಾಗಿ ಮಾತ್ರ ಹೇಳಿದ್ದೇನೆ. ಇನ್ನು ಮುಂದಾದರೂ ರಾಜ್ಯಪಾಲರು ಭಾಷಣವನ್ನು ಓದುವಾಗ ಅದನ್ನು ಮೊದಲೇ ಓದಿಕೊಂಡು ಅದರಲ್ಲಿ ಯಾವುದು ಸರಿಯಾಗಿದೆ, ಯಾವುದು ಸರಿಯಾಗಿಲ್ಲ ಎಂಬುದನ್ನು ತಿಳಿದುಕೊಂಡು ಅನಂತರ ಇಲ್ಲಿ ಬಂದು ಓದಬೇಕೆಂದು ಸದನದ ಮೂಲಕ ರಾಜ್ಯಪಾಲರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ ನಮ್ಮ ತೆವಲಿಗೆ in ourder to serve our political ends, we may write so many things. ಟ್ರಿಬ್ಯುನಲ್‌ನ್ನು ಅಥಾರಿಟಿ ಮಾಡಬಹುದು, ಅಥಾರಿಟಿಯನ್ನು ಟ್ರಿಬ್ಯುನಲ್ ಮಾಡಬಹುದು. ಕತ್ತೆಯನ್ನು ಕುದುರೆ ಮಾಡುತ್ತೇವೆ, ಕುದುರೆಯನ್ನು ಕತ್ತೆ ಮಾಡುತ್ತೇವೆ. ಆದರೆ ಅವೆಲ್ಲವನ್ನೂ ಇಲ್ಲಿ ಬಂದು ಓದಬೇಡಿ. ಇನ್ನು ಮುಂದಾದರೂ ರಾಜ್ಯಪಾಲರು ತಮ್ಮ ಭಾಷಣವನ್ನು ಒಂದು ಸಲ ನೋಡಿ ಅದು ಸರಿಯಾಗಿದೆಯೇ, ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಿ ಅದರ ಭಾಷಣವನ್ನು ಓದಬೇಕೆಂದು ಹೇಳಬಯಸುತ್ತೇನೆ. ಮಾನ್ಯ ಸದಾನಂದಗೌಡರು ಹೋದ ಸದನದಲ್ಲಿ ನಾನು ಇರಲಿಲ್ಲ, ನಾನು ಈ ವರ್ಷದ ಭಾಷಣದ ಬಗ್ಗೆ ಮಾತನಾಡುತ್ತಿದ್ದೇನೋ ಹಿಂದಿನ ವರ್ಷದ ಭಾಷಣದ ಬಗ್ಗೆ ಮಾತನಾಡುತ್ತಿದ್ದಾರೋ ಎಂಬ ಅನುಮಾನ ಬರುತ್ತಿದೆ ಎಂದು ಹೇಳಿದ್ದಾರೆ. ಖಂಡಿತ ನಾನು ಹಿಂದಿನ ರಾಜ್ಯಪಾಲರ ಭಾಷಣದ ಹಿನ್ನೆಲೆಯನ್ನು ಹೇಳಿದಂಥ ಉದ್ದೇಶವೇನೆಂದರೆ ಯಾವುದೇ ಮುಂದಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕಿಂತ ಮೊದಲು ನಮ್ಮ ಹಳೆಯ ಅನುಭವವನ್ನು, ಹಳೆಯ ಪಾಠವನ್ನು ಆಧಾರವಾಗಿಟ್ಟು ಇಟ್ಟುಕೊಳ್ಳಬೇಕು ಎಂಬುದಾಗಿದೆ. ಆ ದೃಷ್ಟಿಯಿಂದ ಹಿಂದೆ ರಾಜ್ಯಪಾಲರ ಭಾಷಣದಲ್ಲಿ ಏನನ್ನು ಹೇಳಿದ್ದರು, ಅದನ್ನೆಲ್ಲಾ ಮಾಡಿದ್ದಾರಾ ಎಂಬ ಪರಿಜ್ಞಾನವನ್ನು ಪ್ರದರ್ಶನ ಮಾಡದೆ ಈ ರಾಜ್ಯಪಾಲರ ಬೊಗಳೆ ಭಾಷಣದ ಮೇಲೆ ಮಾತನಾಡಲು ಇಷ್ಟವಿಲ್ಲವೆಂದು ಅವರದ್ದೇ ಆದ ಭಾಷೆಯಲ್ಲಿ ಅವರು ಹೇಳಿದ್ದಾರೆ. ಜೊತೆಗೆ ಇದು ಒಂದು ಪಕ್ಷಕ್ಕೆ ಸೀಮಿತವಾದ ವಿಚಾರವಲ್ಲ. ಇಂಥ ವಿಷಯಗಳನ್ನು ರಾಜ್ಯಪಾಲರ ಮೂಲಕ ಯಾವುದೇ ಸರ್ಕಾರ ಹೇಳಿಸಲು ಸಾಧ್ಯವೆ? ಅದು ಸಮಂಜವೆ? ಇದರ ಬಗ್ಗೆ ಚರ್ಚೆ ನಡೆಯಲಿ ಎಂಬ ಸದುದ್ದೇಶದಿಂದ ತಮ್ಮ ಗಮನಕ್ಕೆ ತರುವ ಪ್ರಯತ್ನವನ್ನು ನಾನು ಮಾಡಿದ್ದೇನೆ. ಉತ್ತಮವೆಂದು ಹೇಳಬೇಕೆಂದಿದ್ದೆ. ಅದಕ್ಕೆ ಪ್ರಚೋದನೆಯನ್ನು ಕೊಟ್ಟವರು ಮಾನ್ಯ ಸೋಮಶೇಖರ್‌ರವರು. ಅವರು ಪಕ್ಷಾಂತರದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ನಾವುಗಳ್ಯಾರು ಇಂದು ಮಾಯ. ಆಲೋಕದಲ್ಲಿ ತೆಲಲು ಇಷ್ಟಪಡುವುದಿಲ್ಲ.

ಛೇರ್ಮನ್ : ತಾವು ನಾಳೆ ತಮ್ಮ ಭಾಷಣವನ್ನು ಮುಂದುವರೆಸಿ. ಇಲ್ಲಿಗೆ ಸದನವು ಮುಕ್ತಾಯಗೊಳ್ಳುತ್ತದೆ. ಸದನವು ಮತ್ತೆ ನಾಳೆ 11 ಗಂಟೆಗೆ ಸಮಾವೇಶಗೊಳ್ಳುತ್ತದೆ.

ಸದನವು ಸಂಜೆ 6 ಗಂಟೆ 25 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ : 12-4-2000ರಂದು ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)